# ಶಾಲಾ ವಿದ್ಯಾರ್ಥಿಗಳ ಬದುಕು ಅಮೂಲ್ಯವಾಗಿದೆ: ಜಗದೀಶ ಜಾಧವ






**ಬೆಟಗೇರಿ:** ಪ್ರತಿಯೊಬ್ಬ ಶಾಲಾ ಮಗು ಕಲಿಕಾ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು. ವಿದ್ಯಾರ್ಥಿ ವೇತನ ಪಡೆದ ಹಣವನ್ನು ವಿದ್ಯಾರ್ಥಿಗಳು ತಮ್ಮ ಶಿಕ್ಷಣಕ್ಕಾಗಿ ಸದುಪಯೋಗ ಮಾಡಿಕೊಳ್ಳಬೇಕು ಎಂದು ಬೆಟಗೇರಿ ಕೆನರಾ ಬ್ಯಾಂಕ್ ಶಾಖೆಯ ಮ್ಯಾನೇಜರ್ ಜಗದೀಶ ಜಾಧವ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ಕೆನರಾ ಬ್ಯಾಂಕ್ ಶಾಖೆಯ ವತಿಯಿಂದ ಸಿಎಸ್‌ಆರ್ ಯೋಜನೆಯಡಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕೆನರಾ ವಿದ್ಯಾ ಜ್ಯೋತಿ ವಿದ್ಯಾರ್ಥಿ ವೇತನ ಮತ್ತು ಕ್ರೀಡಾ ಸಮವಸ್ತ್ರವನ್ನು ಗೋಕಾಕ ತಾಲೂಕಿನ ಗೋಸಬಾಳ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ನೀಡಿದ ಬಳಿಕ ಮಾತನಾಡಿ, ವಿದ್ಯಾರ್ಥಿ ಬದುಕು ಅಮೂಲ್ಯವಾಗಿದೆ. ಇಂದು ಪ್ರತಿಯೊಬ್ಬರೂ ತಮ್ಮಲ್ಲಿ ದೇಶಾಭಿಮಾನ ಬೆಳಸಿಕೊಳ್ಳಬೇಕು ಎಂದರು.

ಶಾಲೆಯ ಮುಖ್ಯಗುರುಗಳಾದ ಸಿದ್ರಾಮ ಲೋಕನ್ನವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೆಟಗೇರಿ ಕೆನರಾ ಬ್ಯಾಂಕ್ ಶಾಖೆಯ ವತಿಯಿಂದ ಸಿಎಸ್‌ಆರ್ ಯೋಜನೆಯಡಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಕೆನರಾ ವಿದ್ಯಾಜ್ಯೋತಿ ಒಟ್ಟು 24 ಸಾವಿರ ರೂ.ಗಳ ವಿದ್ಯಾರ್ಥಿ ವೇತನವನ್ನು ಒಟ್ಟು 6 ಜನ ಎಸ್‌ಸಿ ಮತ್ತು ಎಸ್‌ಟಿ ಉಭಯ ಶಾಲೆಯ ವಿದ್ಯಾರ್ಥಿನಿಯರಿಗೆ ಮತ್ತು ಸುಮಾರು 20 ಸಾವಿರ ರೂಪಾಯಿಗಳ ಮೌಲ್ಯದ ಕ್ರೀಡಾ ಸಮವಸ್ತ್ರವನ್ನು ನೀಡಿದ ಬಳಿಕ ಸಿಹಿ ವಿತರಿಸಲಾಯಿತು.

ಫೀಲ್ಡ್ ಆಫೀಸರ್ ಮಲ್ಲಿಕಾರ್ಜುನ ನಿಂಬರಗಿ, ಸೋನಾಲಿ ನಾಯ್ಕ, ಪೃಥ್ವಿ ರಡ್ಡಿ, ರಮೇಶ ಪಾಟೀಲ, ಮಹೇಶ ಪತ್ತಾರ, ಬೆಟಗೇರಿ ಕೆನರಾ ಬ್ಯಾಂಕ್ ಶಾಖೆಯ ಸಿಬ್ಬಂದಿ, ಸ್ಥಳೀಯ ಉಭಯ ಶಾಲೆಯ ಶಿಕ್ಷಕರು, ಶಿಕ್ಷಕಿಯರು, ಸಿಬ್ಬಂದಿವರ್ಗ, ವಿದ್ಯಾರ್ಥಿಗಳು, ಇತರರು ಇದ್ದರು.

# ಜನವಸತಿ ಪ್ರದೇಶದಲ್ಲಿನ ಲಕ್ಕನ ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷ



**ಜಮಖಂಡಿ :** ನಗರದ ಜನವಸತಿ ಪ್ರದೇಶದಲ್ಲಿರುವ ಲಕ್ಕನಕೆರೆಯಲ್ಲಿ ಗಣೇಶ ವಿಸರ್ಜನೆಗಾಗಿ ನಗರಸಭೆ ನಿರ್ಮಿಸಿದ್ದ ಹೊಂಡದ ಕಂಪೌಡ ಗೋಡೆಯ ಮೇಲೆ ವಿಶ್ರಾಂತಿ ಪಡೆಯುತ್ತಿರುವ ಮೊಸಳೆಯೊಂದು ಪ್ರತ್ಯಕ್ಷವಾಗಿದೆ.

ಸಾರ್ವಜನಿಕರು ಅರಣ್ಯ ಇಲಾಖೆ ಅಧಿಕಾರಿಗಳ ಗಮನ ತಂದರು ಅಷ್ಟರಲ್ಲಿ ಮತ್ತೆ ಕೆರೆಯಲ್ಲಿ ಮೊಸಳೆ ಇಳಿದು ಹೋಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಶೀಘ್ರವೆ ಪರಿಶೀಲನೆ ಮಾಡಿ ಮೋಸಳೆ ಹಿಡಿದು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳಿಸಲು ಒತ್ತಾಯಿಸಿದರು.

ಪಟವರ್ಧನ ಮಹಾರಾಜರದಲ್ಲಿ ವಿಶಾಲವಾಗಿ ನಿರ್ಮಿಸಿರುವ ಲಕ್ಕನಕೆರೆಯಲ್ಲಿ ಇಂದಿನವರೆಗೆ ಮೊಸಳೆ ಪ್ರತ್ಯಕ್ಷ ಆಗಿರಲಿಲ್ಲ. ಕಳೆದ 8 ತಿಂಗಳ ಹಿಂದೆ ಕರೆಯಲ್ಲಿ ಮೊಸಳೆ ಮರಿ ಇದೆ ಎಂದು ವಿಡಿಯೋ ವೈರಲ್ ಆಗಿತ್ತು. ಆದರೆ ಸೂಕ್ಷವಾಗಿ ಗಮನಿಸದೇ ಹಿಂದೇಟು ಹಾಕಿದ್ದನ್ನು ಸಾರ್ವಜನಿಕರು ನೆನಪಿಕೊಂಡಿದ್ದಾರೆ. ಅದೇ ಮೊಸಳೆ ಮರಿ ದೊಡ್ಡದಾಗಿದೆ ಎಂದು ಸಾರ್ವಜನಿಕರು ಅಭಿಪ್ರಾಯ ಹೇಳುತ್ತಿದ್ದಾರೆ.

ಕಂಡು ಬಂದಿರುವ ಮೊಸಳೆ 15 ತಿಂಗಳಿದ್ದು, ಅಂದಾಜು 120 ಕೆಜಿ ತೂಕಹೊಂದಿರುವ ಸಾಧ್ಯತೆಯಿದೆ. ಕೆರಿಯ ದಡದಲ್ಲಿ ಸಾರ್ವಜನಿಕರು ಹೋಗಬಾರದು. ಶೀಘ್ರದಲ್ಲಿ ಬಂಧಿಸುವ ವ್ಯವಸ್ಥೆ ಮಾಡಲಾಗುವದು ಎಂದು ಅರವ್ಯೆ ಇಲಾಖೆ ಅಧಿಕಾರಿಗಳು ಪತ್ರಿಕೆಗೆ ಹೇಳಿದ್ದಾರೆ.

# ವಿದ್ಯಾರ್ಥಿಗಳು ಪ್ರತಿಯೊಬ್ಬರೂಒಂದೊಂದು ಸಸಿನೆಟ್ಟು ಪ್ರಕೃತಿಯನ್ನು ಉಳಿಸಿ-ರಾಕೇಶ ಅರ್ಜುನವಾಡ

**ಮೂಡಲಗಿ :** "ಪರಿಸರ ವ್ಯವಸ್ಥೆಯಲ್ಲಿ ಬದುಕುತ್ತಿರುವ ನಾವುಗಳು ಅದನ್ನು ಹಾಳು ಮಾಡಿಅನುಭವಿಸುತ್ತಿರುವ ಸಂಕಷ್ಟವನ್ನುಕಣ್ಣಾರೆಕಂಡಿದ್ದೇವೆ.ಅದರ ಭೀಕರತೆಯಅನುಭವ ಸಾಕಷ್ಟು ಪಾಠ ಕಲಿಸಿದೆ. ದೇವರು ನಮಗೆ ಬೇಕಾದ ಸಂಪತ್ತನ್ನೆಲ್ಲಾ ಭುವಿಯಲ್ಲಿ ಸೃಷ್ಟಿಸಿದ್ದಾನೆ. ದುರಾಸೆಗೆ ಬಿದ್ದ ಮಾನವ ಅದರ ಮೇಲೆ ಅಧಿಪತ್ಯ ಸಾಧಿಸಿ ಇಂದು ಪ್ರವಾಹ,ಮೇಘಸ್ಫೋಟದಂತಹ ಪ್ರಾಕೃತಿಕ ದುರಂತಗಳಿಗೆ ಕಾರಣವಾಗಿದ್ದಾನೆ ಎಂದು ವಲಯ ಅರಣ್ಯಾಧಿಕಾರಿ ರಾಕೇಶ್‌ಅರ್ಜುನವಾಡ ಹೇಳಿದರು

ಅವರು ಸ್ಥಳೀಯ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡ 2023-24 ನೇ ಸಾಲಿನ ಎನ್.ಎಸ್. ಎಸ್,ಕ್ರೀಡೆ, ಯುವರೆಡ್‌ಕ್ರಾಸ್, ಸಾಂಸ್ಕೃತಿಕ,ರೋವರ್ಸ ಮತ್ತುರೇಂಜರ್ಸ್



ಘಟಕಗಳ ಸಮಾರೋಪಹಾಗೂ ಅಂತಿಮ ವರ್ಷದಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು

ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀಶ್ರೀಧರಬೋಧ ಸ್ವಾಮೀಜಿಗಳು ಆಶೀರ್ವಚನ ನೀಡಿ"ಮಹಾವಿದ್ಯಾಲಯ ಇಂದು ಸಾಕಷ್ಟು ಅಭಿವೃದ್ಧಿ ಹೊಂದಿದೆ. ಅನೇಕ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಪಡೆದು ಕೆಲಸವನ್ನು ಹುಡುಕಿಕೊಂಡಿದ್ದಾರೆ. ನಿಮಗೆ ಕಲಿಸಿದ ಗುರುಗಳ ಬಗ್ಗೆ ವಿಧೇಯರಾಗಿ ನಡೆದುಕೊಂಡು ಸುಂದರವಾದ ಬದುಕು ರೂಪಿಸಿಕೊಳ್ಳಿ ಭವಿಷ್ಯದಲ್ಲಿಉತ್ತಮ ನಾಗರಿಕರಾಗಿ ಬಾಳಿ" ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಮಹೇಶ ಕಂಬಾರ, ಶಾನೂರಕುಮಾರ ಗಾಣಿಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಯೋಜಕರಾದ ಡಾ.ರವಿ ಗಡದನ್ನವರ, ಸಂಜೀವಕುಮಾರ ಗಾಣಿಗೇರ , ಚೇತನ್‌ರಾಜ್ ಹನುಮಂತ ಕಾಂಬಳೆ, ಸಂಜೀವ ಮದರಖಂಡಿ, ಭೀಮರಾವ್ ನಾಯಕ, ಬಿ.ಸಿ.ಹೆಬ್ಬಾಳ ಶಿವಕುಮಾರ, ಶಿವಾನಂದ ಚಂಡಕೆ, ಅಶ್ವಿನಿ ಎಸ್‌ಶ್ರೀ ಎ.ಜಿ.ಗಿರೆನ್ನವರ, ಶಿವಾಜಿ ಮುಳಿಕ, ಗಾಯತ್ರಿ ಸಾಳೋಖೆ, ಸುಮಿತ್ರಾ ಮಾಸ್ತಿ, ಶೀತಲ ತಳವಾರ, ವಿದ್ಯಾರ್ಥಿ ಪ್ರತಿನಿಧಿಗಳು ಹಾಗೂ ಎಲ್ಲಾ ಪ್ರಾಧ್ಯಾಪಕರುಗಳು ಭಾಗವಹಿಸಿದ್ದರು.

ವಿದ್ಯಾರ್ಥಿ ಪ್ರತಿನಿಧಿಗಳಾದ ಅರ್ಪಿತಾ ಮಳವಾಡ ಹಾಗೂ ಉದಯ ಮಾಳಗೆನ್ನವರ ಅನಿಸಿಕೆ ವ್ಯಕ್ತಪಡಿಸಿದರು. ಶೃತಿ ಮಾಲಗಾರ ಅತಿಥಿಗಳನ್ನು ಪರಿಚಯಿಸಿದರು. ಐಶ್ವರ್ಯ ಕತ್ತಿ ಹಾಗೂ ವಿದ್ಯಾಶ್ರೀ ಸಾಯನ್ನವರ ಸ್ವಾಗತಿಸಿದರು. ವಿದ್ಯಾಶ್ರೀ ವಂದಿಸಿದರು. ಜಯಶ್ರೀ ಮದಿಹಳ್ಳಿ ಹಾಗೂ ಅಭಿಷೇಕ ಕಕಮರಿ ನಿರೂಪಿಸಿದರು.

# ನಗರದ ಅಭಿವೃದ್ಧಿಗೆ ಹೊಸ ಸಂಕಲ್ಪ: ಅಧ್ಯಕ್ಷ ಗೌವರೋಜಿ



**ಜಮಖಂಡಿ :** ನಗರದ ಅಭಿವೃದ್ಧಿಗೆ ಹೊಸ ಯೋಜನೆಗಳನ್ನು ರೂಪಿಸಲು ಸಂಕಲ್ಪ ಮಾಡಲಾಗಿದೆ. ಮಾಜಿ ಶಾಸಕ ಆನಂದ ಸಿದ್ದು ನ್ಯಾಮಗೌಡ ನೇತೃತ್ವದಲ್ಲಿ ನಗರಸಭೆ ಎಲ್ಲ ಸದಸ್ಯರ ಜೊತೆಗೂಡಿ ಕೆಲಸ ಮಾಡುತ್ತೇನೆ ಎಂದು ನಗರಸಭೆ ನೂತನ ಅಧ್ಯಕ್ಷ ಪರಮಾನಂದ ಗವರೋಜಿ ಹೇಳಿದರು.

ನಗರಸಭೆ ಆವರಣದಲ್ಲಿ ಗೆಲವಿ ಸಂಕೇತ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಳಿದಿರುವ ಸಮಯದಲ್ಲಿ ನಗರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಎಲ್ಲ ಕಾಮಗಾರಿಗಳಿಗೆ ಚಾಲನೆ ನೀಡಲಾಗುವದು. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನನ್ನ ಗೆಲವಿಗೆ ಶ್ರಮಿಸಿದ ಎಲ್ಲರಿಗೂ ಅಭಿನಂದನೆಗಳು.

ಶೀಘ್ರದಲ್ಲಿ ನಗರಸಭೆ ಸಾಮಾನ್ಯ ಸಭೆ ಕರೆದು ಎಲ್ಲ ಸದಸ್ಯರೊಂದಿಗೆ ಚರ್ಚಿಸುವ ಮೂಲಕ ಅಭಿವೃದ್ಧಿ ಕಾಮಗಾರಿ ಗಳ ಜೊತೆಗೆ ಅಗತ್ಯ ಮೂಲಭೂತ ಸೌಕರ್ಯ ಚರ್ಚೆ ಮಾಡುವ ಮೂಲಕ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಮಹಿಳಾ ಶೌಚಾಲಯಗಳು, ರಸ್ತೆ ದುರಸ್ತಿ ವಿವಿಧ ಸಮಸ್ಯೆಗಳಿಗೆ ಹೆಚ್ಚಿನ ಆಧ್ಯತೆ ನೀಡಲಾಗುವದು ಎಂದರು.

ಇದೇ ಸಂದರ್ಭದಲ್ಲಿ ನೂತನ ಉಪಾಧ್ಯಕ್ಷೆ ರೇಖಾ ಕಾಂಬಳೆ ಸಹಿತ ಹಲವರು ಇದ್ದರು.

# ಕಸಾಪ ಮತ್ತು ಕಜಾಪ ಜಿಲ್ಲಾ ಘಟಕಗಳ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ

# ಸಾಧನೆಗೆ ಪರಿಶ್ರಮದ ಓದು ಮುಖ್ಯ: ಡಾ. ವೀರೇಶ ಬಡಿಗೇರ







**ಬಾಗಲಕೋಟೆ :** ಸ್ಪರ್ಧಾತ್ಮಕ ಯುಗದಲ್ಲಿರುವ ವಿದ್ಯಾರ್ಥಿಗಳು ಗ್ರಂಥಾಲಯ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ನಿರಂತರ ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ತಮ್ಮ ಸಾಧನೆಗೆ ಪರಿಶ್ರಮದ ಓದು ಮುಖ್ಯ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಅವರು ಹೇಳಿದರು.

ಅವರ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ ಹಾಗೂ ಕರ್ನಾಟಕ ಜಾನಪದ ಪರಿಷತ್ತು ಜಿಲ್ಲಾ ಘಟಕ ಇವರ ಸಹಯೋಗದಲ್ಲಿ ಗುರುವಾರ ನವನಗರದ ಕನ್ನಡ ಸಾಹಿತ್ಯ ಪರಿಷತ್ತು ಸಭಾಭವನದಲ್ಲಿ ನಡೆದ 2023-24 ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ಜಿಲ್ಲಾ ಕಲಾವಿದರ, ಸಾಹಿತಿಗಳ, ಪತ್ರಕರ್ತರ ಮತ್ತು ಸಂಘಟಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದರು.

ಎಲ್ಲಿ ದುಡುಮೆ ಇರುತ್ತೆ ಅಲ್ಲಿ ಸತ್ಯ ಇರುತ್ತೆ, ಎಲ್ಲಿ ಸತ್ಯ ಇರುತ್ತೆ ಅಲ್ಲಿ ಸಾಧನೆ ಮಾಡುವ ಸಾರ್ಥಕತೆ ಛಲ ಬೆಳೆಯುತ್ತದೆ. ಕಾಲಕಾಲಕ್ಕೆ ಮಳೆಬೆಳೆ ಬರಲು ನಮ್ಮ ನೆಲೆದ ಜಾನಪದರು ಕಟ್ಟಿರುವ ಪದಗಳು ಮುಖ್ಯ. ಅದರಲ್ಲಿರುವ ಮೌಲ್ಯಗಳು ಇಂದಿನ ಯುವಕರಿಗೆ ಅಳವಡಿಸಿಕೊಳ್ಳಬೇಕಾಗಿದೆ. ವಿದ್ಯಾರ್ಥಿಗಳು ತಮ್ಮಲ್ಲಿರುವ ಜ್ಞಾನದ ಸಾಮರ್ಥ್ಯ ಅರಿತರೆ ಪ್ರತಿಭೆಗೆ ಬಡತನವಿಲ್ಲ, ಮೋಬೈಲಿಗೆ ರೆಸ್ಟ್ ಕೊಟ್ಟು, ಮೇದುಳಿಗೆ ಕೆಲಸ ಕೊಡುವ ಕಾರ್ಯ ಮಾಡಬೇಕಾಗಿದೆ. ವಿದ್ಯಾರ್ಥಿಗಳು ಸತತವಾದ ಅಧ್ಯಯನದಲ್ಲಿ ತೊಡಗಿಕೊಂಡು ಸಮಾಜದಲ್ಲಿ ಆದರ್ಶದ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂದರು.

ಕಲಕತ್ತಾ ಐಐಟಿ ಪ್ರತಿಭಾವಂತ ವಿದ್ಯಾರ್ಥಿ ವಿಕ್ರಮ್ ಚಂದ್ರಕಾಂತ ಜೋಶಿ ಅವರು ಕನ್ನಡ ಭುವನೇಶ್ವರಿದೇವಿಗೆ ಪುಷ್ಪಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮಲ್ಲಿರುವ ಜ್ಞಾನವನ್ನು ಮೊದಲು ತಾವೇ ಅರಿತುಕೊಂಡು, ಓದುವ ಉತ್ತಮ ಪರಿಸರ ಸೃಷ್ಟಿಸಿಕೊಳ್ಳಬೇಕು. ಅಂತರಜಾಲದಲ್ಲಿ ದೊರೆಯುವ ಓದಿನ ಪರಿಕರಗಳನ್ನು ಸರಿಯಾಗಿ ಸಂಗ್ರಹಿಸಿಕೊಂಡು, ಸ್ಪರ್ಧಾತ್ಮಕ ಪರಿಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕು. ತಾವು ಶಿಸ್ತುಬದ್ಧವಾಗಿ ಓದುವದರಿಂದ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಸುಲಭವಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಬಿ.ಕೆ.ನಂದನೂರ ಅವರು ಅಭಿನಂದನಾ ನುಡಿ ಹೇಳಿ, ರಾಜ್ಯದಲ್ಲಿಯೇ ನಮ್ಮ ಜಿಲ್ಲೆಯು ಶೈಕ್ಷಣಿಕ ಪ್ರಗತಿ ಮತ್ತು ಸಾಧನೆಯಲ್ಲಿ ಉತ್ತಮ ಶ್ರೇಣಿಯಲ್ಲಿದೆ. ನಮ್ಮ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ನಮ್ಮ ಇಲಾಖೆ ಸರಿಯಾಗಿ ಒದಗಿಸುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಸಾಪ ಮತ್ತು ಕಜಾಪ ಜಿಲ್ಲಾಧ್ಯಕ್ಷರಾದ ಶಿವಾನಂದ ಶೆಲ್ಲಿಕೇರಿ ಅವರು ಮಾತನಾಡಿ ನಮ್ಮ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುವ ಪ್ರತಿಭಾ ಪುರಸ್ಕಾರದಿಂದ ಅವರಲ್ಲಿ ಓದುವ ಅಭಿರುಚಿ ಹೆಚ್ಚಾಗಿ, ಸಮಾಜದಲ್ಲಿ ಸಾಧನೆ ಮಾಡುವ ಹಂಬಲ ಮತ್ತು ಆಸಕ್ತಿ ಬೆಳೆಯುತ್ತದೆ.


ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆನಂದ ದಲಬಂಜನ ಅವರು ಮಾತನಾಡಿ ನಮ್ಮ ಜಿಲ್ಲೆಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವದರಿಂದ ಅವರ ಮುಂದಿನ ವ್ಯಾಸಂಗಕ್ಕೆ ಪ್ರೇರಣೆ ಮತ್ತು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು. ಸಾಹಿತಿಗಳಾದ ಮಲ್ಲಿಕಾರ್ಜುನ ಶೆಲ್ಲಿಕೇರಿ ಅವರು ಮಾತನಾಡಿ, ಪ್ರತಿಭಾ ಪುರಸ್ಕಾರದಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಜವಾಬ್ದಾರಿ ಹೆಚ್ಚುತ್ತದೆ ಎಂದರು

ಸಮಾರಂಭದಲ್ಲಿ ಕಸಾಪ ಗೌರವ ಕೋಶಾಧ್ಯಕ್ಷ ಡಾ.ಸಿ.ಎಂ.ಜೋಶಿ, ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ, ಕಜಾಪ ಪ್ರಧಾನ ಕಾರ್ಯದರ್ಶಿ ಸಿ.ಎನ್.ಬಾಳಕ್ಕನವರ, ಕೋಶಾಧ್ಯಕ್ಷ ಆರ್.ಸಿ.ಚಿತ್ತವಾಡಿಗಿ, ಕಸಾಪ ತಾಲೂಕ ಅಧ್ಯಕ್ಷರಾದ ಪಾಂಡುರಂಗ ಸಣ್ಣಪ್ಪನವರ, ಡಾ.ಹೆಚ್. ಎಸ್.ಘಂಟಿ, ಮಲ್ಲಿಕಾರ್ಜುನ ಸಜ್ಜನ, ಸಂಘಟನಾ ಕಾರ್ಯದರ್ಶಿಗಳಾದ ಸಿ.ಎಸ್.ನಾಗನೂರ, ಡಾ.ಗೀತಾ ದಾನಶೆಟ್ಟಿ, ವಿಜಯಶ್ರೀ ಮುರನಾಳ, ಮಾಧ್ಯಮ ಕಾರ್ಯದರ್ಶಿ ಪ್ರಕಾಶ ಗುಳೇದಗುಡ್ಡ, ಸಂಗಮೇಶ ಬಡಿಗೇರ, ಮಲ್ಲಿಕಾರ್ಜುನ ಪೂಜಾರ ಸೇರಿದಂತೆ ಕಸಾಪ ಕಜಾಪ ಪದಾಧಿಕಾರಿಗಳು, ಸಾಹಿತಿಗಳಾದ ಡಾ.ಪ್ರಕಾಶ ಖಾಡೆ ಮತ್ತು ಕಲಾವಿದರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶಾಖಾಂಬರಿ ಮಹಿಳಾ ಮಂಡಳಿ ಸದಸ್ಯರು ಪ್ರಾರ್ಥನೆ ಗೀತೆ ಹಾಡಿದರು. ಡಾ.ಸಿ.ಎಂ.ಜೋಶಿ ಸ್ವಾಗತಿಸಿದರು ಸಿ.ಎಸ್. ನಾಗನೂರ ಪ್ರಾಸ್ತಾವಿಕ ನುಡಿ ಹೇಳಿದರು, ಪಾಂಡುರಂಗ ಸಣ್ಣಪ್ಪನವರ ವಂದಿಸಿದರು ಡಾ.ಚಂದ್ರಶೇಖರ ಕಾಳನ್ನವರ ನಿರೂಪಿಸಿದರು.

# ಬ್ರಿಟೀಷರಿಂದ ಸ್ವಾತಂತ್ರ್ಯ ಕಿತ್ತುಕೊಂಡಿದ್ದೇವೆ-ಶಾಸಕ ಸವದಿ

# ಚಿಮ್ಮಡದಲ್ಲಿ ಯೋಧನ ಕಂಚಿನ ಪ್ರತಿಮೆ ಅನಾವರಣ




**ಚಿಮ್ಮಡ :** ದೇಶಕ್ಕೆ ಸ್ವಾತಂತ್ರ್ಯ ಬ್ರಿಟೀಷರು ದಾನವಾಗಿ ನೀಡಿಲ್ಲ ವಿಧ-ವಿವಿಧ ಹೋರಾಟಗಳ ಮೂಲಕ ಅವರಿಂದ ನಾವು ಕಿತ್ತುಕೊಂಡಿದ್ದೇವೆಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು,

ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿದ್ದ ವೀರ ಯೋಧ ಬಸವರಾಜ ಸಿದ್ದಪ್ಪ ನಾವಿಯವರ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ಸ್ವಂತಂತ್ರ್ಯ ಪಡೆಯಲು ಹಲವಾರು ದೇಶಭಕ್ತರು ತಮ್ಮ ಬಲಿದಾನಗೈದಿದ್ದಾರೆ, ಹಲವು ಮಹಾತ್ಮರು ಕಠಿಣ ಜೈಲುವಾಸದೊಂದಿಗೆ ಚಿತ್ರಹಿಂಸೆ ಅನುಭವಿಸಿದ್ದಾರೆ ಅಲ್ಲದೇ ಸಾವಿರಾರು ಜನ ಹೋರಾಟಗಾರರು ತಮ್ಮ ಆಸ್ತಿ-ಪಾಸ್ತಿ ಕಳೆದುಕೊಂಡಿದ್ದಾರೆ ಎಂದರು.

ಕಾಂಗ್ರೆಸ್ ಧುರೀಣ ಸಿದ್ದು ಕೊಣ್ಣೂರ ಮಾತನಾಡಿ ನಾವಿಲ್ಲಿ ಸುಖವಾಗಿ ನಿದ್ರೆ ಮಾಡಲು ಕಾರಣ ಯೋಧರು ನಿದ್ದೆಗೆಟ್ಟು ನಮಗಾಗಿ ಗಡಿ ಕಾಯುತ್ತಾರೆ, ದೇಶಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ವೀರ ಸೇನಾನಿಗಳ ಕುಟುಂಬವನ್ನು ಕಾಯುವುದು ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯಾಗಿದೆ ಎಂದರು.

ಉಪನ್ಯಾಸಕರಾಗಿ ಆಗಮಿಸಿದ ಪತ್ರಕರ್ತ ಶಿವಲಿಂಗ ಸಿದ್ನಾಳ ಮಾತನಾಡಿ ಸಿಸ್ತು, ಗತ್ತು ನೀಯತ್ತು, ತಾಕತ್ತು, ಹಾಗೂ ಸಂಪತ್ತು ಇವೆಲ್ಲವೂ ಸಿಗುವುದು ಸೈನಿಕ ಹುದ್ದೆಯಲ್ಲಿ ಮಾತ್ರ ಎಂದ ಅವರು ಸೈನಿಕರ ಪರ ಹಲವಾರು ನುಡಿಮುತ್ತುಗಳ ಮೂಲಕ ನೆರೆವರಲ್ಲಿ ದೇಶಭಕ್ತಿಯ ಕಿಚ್ಚು ಹಚ್ಚಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಪ್ರಭು ಮಹಾಸ್ವಾಮಿಗಳು, ಶ್ರೀ ಜನಾರ್ಧನ ಮಹಾರಾಜರು ವಹಿಸಿದ್ದರು, ಅಧ್ಯಕ್ಷತೆ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಬಸಪ್ಪಾ ಮಂಗರವಾಡಿ ವಹಿಸಿದ್ದರು. ಗ್ರಾ.ಪಂ ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ, ಪಿಕೆಪಿಎಸ್ ಅಧ್ಯಕ್ಷ ಹಣಮಂತ ನೇಸೂರ, ಮುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ರಾಮಣ್ಣ ಬಗನಾಳ, ಗ್ರಾಮ ಆಡಳಿತ ಅಧಿಕಾರಿ ಮಂಜುನಾಥ ನೀಲನ್ನವರ, ವೈದ್ಯಾಧಿಕಾರಿ ಡಾ; ಕೆ.ಎಸ್.ಘೂಳನ್ನರ, ಮಲ್ಲಪ್ಪ ಸಿಂಗಾಡಿ, ಪ್ರಭು ಮುಧೋಳ, ಉಮೇಶ ಪೂಜಾರಿ, ಮಹಾಲಿಂಗ ಬಳಗಾರ, ಶ್ರೀಶೈಲ ಮಠಪತಿ, ಯೋಧ ಮುತ್ತು ನಾಂವಿ, ಸೇರಿದಂತೆ ಕುಟುಂಬಸ್ಥರು, ಹಾಗೂ ಮಾಜಿ ಯೋಧರ ಸಂಘಟಣೆಯ ಪ್ರಮುಖರು ಉಪಸ್ಥಿತರಿದ್ದರು. ಶಿಕ್ಷಕ ಮಹಾಂತೇಶ ಬಡಿಗೇರ ಸ್ವಾಗತಿಸಿ ನಿರೂಪಿಸಿದರು.

# ನಗರಸಭೆ ಅಧ್ಯಕ್ಷರಾಗಿ ಗೌವರೋಜಿ ಉಪಾಧ್ಯಕ್ಷರಾಗಿ ರೇಖಾ ಗೆಲವು

**ಜಮಖಂಡಿ :** ನಗರಸಭೆಯಲ್ಲಿ ಶುಕ್ರವಾರ ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಗೆ ಸರ್ಕಾರ ಅಧಿಸೂಚನೆ, ಜಿಲ್ಲಾಧಿಕಾರಿಗಳ ಆದೇಶದಂತೆ ಶಾಂತ ರೀತಿಯಲ್ಲಿ ನಡೆಯಿತು.

ನಗರಸಭೆ ಸಾಮಾನ್ಯ ಕ್ಷೇತ್ರದ ಅಧ್ಯಕ್ಷ ಸ್ಥಾನಕ್ಕೆ ಪರಮಾನಂದ ಗವರೋಜಿ ಮತ್ತು ಮೀಸಲಾತಿ ಉಪಾಧ್ಯಕ್ಷ ಸ್ಥಾನಕ್ಕೆ ರೇಖಾ ಕಾಂಬಳೆ ತಲಾ 24 ಮತಗಳನ್ನು ಪಡೆದು ಆಯ್ಕೆಗೊಂಡಿದ್ದಾರೆ ಎಂದು ಚುನಾವಣೆ ಅಧಿಕಾರಿ, ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ ಘೋಷಿಸಿದರು.

ಒಟ್ಟು 31 ಸದಸ್ಯರನ್ನು ಹೊಂದಿರುವ



ನಗರಸಭೆಗೆ 21 ಕಾಂಗ್ರೆಸ್, 7 ಬಿಜೆಪಿ ಮತ್ತು 3 ಪಕ್ಷೇತರರು ಗೆಲವು ಸಾಧಿಸಿದ್ದರು. ಅಧ್ಯಕ್ಷ ಸ್ಥಾನಕ್ಕೆ 3 ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ 2 ನಾಮಪತ್ರಗಳು ಸಲ್ಲಿಕೆ ಆಗಿದ್ದವು. ನಂತರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರಮಾನಂದ ಗೌರೋಜಿ 24 ಮತ ಪಡೆದು ಗೆಲವು ಸಾಧಿಸಿದರು. ಬಿಜೆಪಿ ಪಕ್ಷದ ಅಭ್ಯರ್ಥಿ ಅನಸೂಯಾ ಅಸುಗಡೆ ಶಾಸಕ ಮತ್ತು ಸಂಸದರ ಮತ ಸಹಿತ 9 ಮತಗಳನ್ನು ಪಡೆದು ಸೋಲು ಅನುಭವಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ರೇಖಾ ಕಾಂಬಳೆ 24 ಮತಗಳನ್ನು ಪಡೆದುಕೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯ ಕುಶಾಲ ವಾಗಮೋರೆ 9 ಮತಗಳನ್ನು ಪಡೆದು ಸೋಲು ಅಉಭವಿಸಿದರು.

ಇದೇ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಜೋತಿಗಿರೀಶ, ಸದಸ್ಯರಾದ ದಾನೇಶ ಘಾಟಗೆ, ಸುನೀಲ ಶಿಂಧೆ, ಕಿರಣ ಪಿಸಾಳ, ಪ್ರಕಾಶ ಸಹಿತ ಎಲ್ಲ ನಗರಸಭೆ ಸದಸ್ಯರು ಇದ್ದರು.

# ಮಹಿಳೆಯರಿಂದ ನಾಗರ ಪಂಚಮಿಯ ಜೋಕಾಲಿ ಆಟ



**ಜಮಖಂಡಿ :** ನಗರದಲ್ಲಿ ನಾಗರ ಪಂಚಮಿ ಪ್ರಯುಕ್ತ ಮಹಿಳೆಯರು ಸಂಭ್ರಮದಿಂದ ಜೋಕಾಲಿ ಆಟದಲ್ಲಿ ತೊಡಗಿ ಕೊಂಡಿದ್ದಾರೆ. ಗಡಾದ ಗಲ್ಲಿಯ ಸಾರ್ವಜನಿಕವಾಗಿ ನಿರ್ಮಿಸಿರುವ ಬೃಹತ್ ಗಾತ್ರದ ಜೋಕಾಯಲ್ಲಿ ಮಹಿಳೆಯರು ಮಕ್ಕಳು ಸರದಿಯಲ್ಲಿ ನಿಂತು ಜೋಕಾಲಿ ಆಟವನ್ನು ಸಂಭ್ರಮಿಸಿದರು.

# ದಂತಗಳು ಮಾನವನಿಗೆ ಅತ್ಯಂತ ಉಪಯುಕ್ತ: ಡಾ. ಮಹೇಶ



**ಜಮಖಂಡಿ :** ದಂತಗಳು ನಾಲ್ಕು ದೃಷ್ಟಿಯಲ್ಲಿ ಮಾನವನಿಗೆ ಉಪಯುಕ್ತವಾಗಿವೆ. ಆಹಾರ ಪಚನಗೊಳಿಸಲು, ಪೋಷಕಾಂಶ ಅಥವಾ ಶಕ್ತಿ ಉತ್ಪತ್ತಿಸಲು, ಮಾತತನಾಡಲು ಮತ್ತು ಸುಂದರವಾಗಿ ಕಾಣಲು ದಂತಗಳು ಅತ್ಯವಶ್ಯಕ ಆಗಿವೆ ಎಂದು ಸಾರ್ವಜನಿಕ ಆರೋಗ್ಯ ಅಧಿಕಾರಿ ಡಾ.ಮಹೇಶ ಹಿರೇಗೌಡರ ಹೇಳಿದರು.

ನಗರದ ಸರಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನಲ್ಲಿ ರೆಡ್‌ಕ್ರಾಸ್ ಘಟಕ, ಎನ್.ಎನ್.ಎಸ್. ಘಟಕ, ಮಹಿಳಾ ಸಬಲೀಕರಣ ಘಟಕ ಹಾಗೂ ಸಿ.ಎಂ.ಎನ್.ಎಂ. ಡೆಂಟಲ್ ಕಾಲೇಜ್ ಮತ್ತು ಆಸ್ಪತ್ರೆ ಬಾಗಲಕೋಟೆ ಸಹಯೋಗದಲ್ಲಿ ಉಚಿತ ದಂತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ದಂತಗಳನ್ನು ಸಂರಕ್ಷಣೆಗಾಗಿ ಸಾಮಾನ್ಯ ನಿಯಮಗಳನ್ನು ಅನುಸರಿಸುವುದು ಅವಶ್ಯಕವಾಗಿದೆ. ಪ್ರತಿದಿನ ಎರಡು ಬಾರಿಯಾದರೂ ಹಲ್ಲುಗಳನ್ನು ಸ್ವಚ್ಛ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಹುಳುಕು ತಿನ್ನುವುದು, ಕ್ಯಾನ್ಸರ್ ಆಗುವ ಸಾಧ್ಯತೆಯಿದೆ. ಶುಚಿಗೊಳಿಸುವ ಮೂಲಕ ದುರ್ವಾಸನೆ ಬರುವದಿಲ್ಲ. ಸೇವಿಸಿದ ಆಹಾರ ಹಲ್ಲುಗಳಲ್ಲಿ ಶೇಖರಣೆ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ.ಸುನಂದಾ ಶಿರೂರ ಮಾತನಾಡಿದರು. ಡಾ. ಎಸ್.ವಿ.ಹರ್ಷಿತ ಸುರಕ್ಷತೆ ಕ್ರಮಗಳ ಬಗ್ಗೆ ಪಿಪಿಟಿ ಪ್ರೊಜೆಕ್ಟರ್ ಮೂಲಕ ಮಾಹಿತಿ ನೀಡಿದರು. ಡಾ. ಎಂ.ಎಂ.ಮಂಟೂರ, ಐ.ಕ್ಯೂ.ಎ.ಸಿ. ಸಂಯೋಜಕ ಡಾ.ವಿ.ಆರ್. ದಳವಾಯಿ, ಪಿ.ಎಂ.ಎನ್.ಎಂ. ಡೆಂಟಲ್ ಕಾಲೇಜಿನ ಡಾ. ಸಲೋನಿ ದಾಮೋದರೆ, ಡಾ.ಸುಕೃತಿ ಧಾಸಡೆ, ಡಾ.ಪ್ರಿಯಾ ದೋಶಿ, ಡಾ.ಜಿ.ಆರ್.ಸಿದ್ದಲಿಂಗಪ್ಪ, ಡಾ.ಹೆಚ್.ಹರ್ಷಿತಾ, ಡಾ.ಹೃಷಿಕೇಶ್ ಕರ್ವಾ, ಆರ್.ಎಸ್.ಜಾಧವ ಎಸ್. ಆರ್.ಹಂದಿಗುಂದ ಸಹಿತ ಹಲವರು ಇದ್ದರು.

# ಅರ್ಬನ ಬ್ಯಾಂಕಿನಲ್ಲಿ ಅಧ್ಯಕ್ಷ ರಾಹುಲ ಧ್ವಜಾರೋಹಣ

**ಜಮಖಂಡಿ :** ನಗರದ ದಿ. ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ಆವರಣದಲ್ಲಿ ಬ್ಯಾಂಕ ಅಧ್ಯಕ್ಷ ರಾಹುಲ ಕಲೂತಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಮಹಾತ್ಮಾ ಗಾಂಧೀಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ 78ನೇ ವರ್ಷದ ದ್ವಜಾರೋಹಣ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ನಿರ್ದೇಶಕರಾದ ಜಿ.ಎಸ್.ನ್ಯಾಮಗೌಡ, ಕಾಡು ಮಾಳಿ, ಅಪ್ಪಾಸಾಬ ಮನಗೂಳಿ, ಎ.ಆರ್. ಸಿಂಧೆ, ವಿರಪಾಕ್ಷಯ್ಯ ಕಂಬಿ, ಪ್ರಧಾನ ವ್ಯವಸ್ಥಾಪಕ ಎಸ್.ಆರ್.ತುಪ್ಪದ, ವ್ಯವಸ್ಥಾಪಕ ಸಂತೋಷ ಹಲ್ಯಾಳ ಸಹಿತ ಹಲವರು ಇದ್ದರು.



# ನಮ್ಮೆಲ್ಲರ ಮೂಲ ನಿವಾಸಿಗಳೇ ಬುಡಕಟ್ಟು ಜನರು: ತಳವಾರ

**ಬೀಳಗಿ :** ವೈವಿಧ್ಯಪೂರ್ಣವಾದ ಜನಾಂಗ ದೇಶದಲ್ಲಿವೆ. ರಾಜ್ಯದಲ್ಲಿ 50 ಬುಡಕಟ್ಟು ಜನಾಂಗ ಇದ್ದು, ನಮ್ಮೆಲ್ಲರ ಮೂಲ ನಿವಾಸಿಗಳೇ ಬುಡಕಟ್ಟು ಜನರು. ಏಕಪ್ರಕಾರವಾದ ನೈಸರ್ಗಿಕ ಕಾಯಿದೆ ಕಟ್ಟಳೆ ಅನುಸರಿಸುವ ಮತ್ತು ಸಮಾನ ಸಂಸ್ಕೃತಿ ಹಾಗೂ ಸುಸಂಘಟಿತ ಸಾಮಾಜಿಕ ವ್ಯವಸ್ಥೆಯನ್ನು ರೂಢಿಸಿಕೊಂಡಿರುವ ಸಾಮಾಜಿಕ ಗುಂಪಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯ ಕಾರ್ಯಕಾರಿಣಿ ಸದಸ್ಯ ಗುರುನಾಥ ಜಿ ತಳವಾರ ಹೇಳಿದರು.



ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದಲ್ಲಿ ಕನ್ನಡ ಜಾನಪದ ಪರಿಷತ್ ಬೆಂಗಳೂರು, ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಬಾಗಲಕೋಟೆ ಹಾಗೂ ತಾಲೂಕು ಘಟಕ ಬೀಳಗಿ ಮತ್ತು ಸರಕಾರಿ ಪದವಿ ಪೂರ್ವ ಕಾಲೇಜು ಚಿಕ್ಕಾಲಗುಂಡಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ವಿಶ್ವ ಬುಡಕಟ್ಟು ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ಬುಡಕಟ್ಟು ಜನರಿಗೆ ಅಂದು ಧರಿಸಲು ಬಟ್ಟೆ ಇರಲಿಲ್ಲ. ಆದರೆ ಇಂದು ನಮ್ಮ ಜನರು ಬಟ್ಟೆ ಇದ್ದರೂ ತುಂಡು ತುಂಡಾಗಿ ಕತ್ತರಿಸಿ ಹಾಕಿಕೊಳ್ಳುತ್ತಿರುವುದು ವಿಪರ್ಯಾಸವೇ ಸರಿ. ಜಗತ್ತಿನ ಬುಡಕಟ್ಟು ಜನರು ಒಂದೇ ತೆರನಾಗಿ ಹಬ್ಬ ಆಚರಿಸುವ ಸಾಮ್ಯತೆ ಕಂಡು ಬರುತ್ತದೆ ಎಂದು ಹೇಳಿದರು.

ಮಲ್ಲಿಕಾರ್ಜುನ ಮಠದ ಶಿವಶರಣಾನಂದ ಸ್ವಾಮಿಗಳು ಸಾನ್ನಿಧ್ಯ ವಹಿಸಿ, ಜಾನಪದ ನುಡಿಗಟ್ಟು ವಾಚಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಪ್ರಕೃತಿದತ್ತವಾಗಿ ಬಂದ ಶರೀರ ಪ್ರಕೃತಿಯ ಜೊತೆಗೆ ಬದುಕಬೇಕೆಂಬ ತುಡಿತ ಬುಡಕಟ್ಟು ಜನರದ್ದಾಗಿದೆ. ಬುಡಕಟ್ಟು ಜನರ ಆಚಾರ-ವಿಚಾರ, ಆಹಾರ-ವಿಹಾರ, ಭಾಷೆ ವಿಶಿಷ್ಟವಾದವು. ದೇಶ, ನಾಡು, ಮಣ್ಣು ವಿಕೃತಿಗೊಳಿಸದೇ, ಪ್ರಕೃತಿದತ್ತವಾಗಿ ಬದುಕುವವರು. ವಿಷಮುಕ್ತವಾದ ಆಹಾರ, ಹಣ್ಣು-ಹಂಪಲು ಸೇವಿಸುತ್ತಾರೆಂದು ಹೇಳಿದರು.

ಪ್ರಾಚಾರ್ಯ ವೈ. ಎಸ್. ರೂಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬುಡಕಟ್ಟು ಜನಾಂಗ ಈ ದೇಶದ ಮೂಲ ನಿವಾಸಿಗಳಾಗಿದ್ದು, ಅವರ ಆಚಾರ ಪದ್ಧತಿ, ಸಂಸ್ಕೃತಿಯನ್ನು ಉಳಿಸುವ ಕೆಲಸವಾಗಬೇಕು. ಬುಡಕಟ್ಟು ಜನಾಂಗ ತಮ್ಮದೇ ಜೀವನ ಶೈಲಿ, ಸಂಸ್ಕೃತಿ, ಭಾಷೆ ಹೊಂದಿದೆ ಎಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಮಾತನಾಡಿ, ಬುಡಕಟ್ಟು ಜನರ ಬದುಕೇ ಒಂದು ಜಾನಪದವಾಗಿದ್ದು, ಪ್ರತಿಯೊಂದು ಬುಡಕಟ್ಟು ವಿಶಿಷ್ಟವಾಗಿದ್ದು. ಬುಡಕಟ್ಟು ಜನಾಂಗದವರು ತಮ್ಮದೇ ರೀತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಹೊಂದಿದ್ದು. ಸಾಂಪ್ರದಾಯಿಕವಾಗಿ ಪ್ರಕೃತಿಯ ಆರಾಧಕರಾಗಿದ್ದಾರೆಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಬಸವರಾಜ ದಾವಣಗೆರೆ ಪ್ರಾಸ್ತಾವಿಕವಾಗಿ ಮಾತನಾಡಿ, ಬುಡಕಟ್ಟು ಜನರು ಪ್ರಕೃತಿಯ ಮಡಿಲಲ್ಲಿ ಜೀವಿಸುವವರು. ಪ್ರಕೃತಿಯೇ ಅವರಿಗೆ ದೇವರು. ಅವರು ಪರಿಸರದ ಅವಿಭಾಜ್ಯ ಅಂಗವಾಗಿರುವರು ಎಂದು ಹೇಳಿದರು.

# ಭಾರತ ಆಮದು ರಾಷ್ಟ್ರ ಬದಲಾಗಿ ರಪ್ತು ದೇಶವಾಗಿದೆ

**ಜಮಖಂಡಿ :** 1947ರಲ್ಲಿ ದೇಶ ಸ್ವತಂತ್ರಗೊಂಡ ನಂತರ ಮೂಲಭೂತ ಸಹಿತ ವಿವಿಧ ಬಾಹ್ಯ ಸಮಸ್ಯೆಗಳನ್ನು ಎದುರಿಸುವ ಮೂಲಕ ಆಹಾರ ಕೊರತೆಯನ್ನು ನಿಭಾಯಿಸಿದ ಭಾರತ ದೇಶ ಆಮದು ರಾಷ್ಟ್ರದಿಂದ ರಪ್ತು ರಾಷ್ಟ್ರವಾಗಿ ಬೆಳೆದಿದೆ ಎಂದು ಸಂಸ್ಥೆಯ ಅಧ್ಯಕ್ಷ ಮಾಜಿ ಶಾಸಕ ಆನಂದ ಸಿದ್ದು ನ್ಯಾಮಗೌಡ ಹೇಳಿದರು.



ನಗರದ ಪ್ರತಿಷ್ಠಿತ ರಾಯಲ್ ಪ್ಯಾಲೇಸ್ ಶಾಲೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವದ ಅದ್ದೂರಿ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಅವರು, ಆರೋಗ್ಯ, ಶಿಕ್ಷಣ, ರಕ್ಷಣೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ. ಇದಕ್ಕೆಲ್ಲ ದೂರದೃಷ್ಟಿಯ ನೇತೃತ್ವ ಮತ್ತು ಕ್ರಿಯಾಶೀಲ ಸಮಾಜ ಕಾರಣವಾಗಿದೆ.

ಅಂತೆಯೇ ವಿದ್ಯಾರ್ಥಿಗಳನ್ನು ಪಂಚಶೀಲಗಳಾದ ಸಮಯಪಾಲನೆ, ಸತತ ಪರಿಶ್ರಮ, ಶಿಸ್ತುಬದ್ಧ ಜೀವನ, ಗುರಿಯ ಕಡೆ ಆಸಕ್ತಿ ಮತ್ತು ಸಹನೆಯನ್ನು ಅಳವಡಿಸಿಕೊಂಡು ದೇಶದ ಸಮಗ್ರ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಬೇಕು ಎಂದರು.

ಪ್ರಾಚಾರ್ಯೆ ರೀತಾ ಜೈನರ ಅಧ್ಯಕ್ಷತೆ ವಹಿಸಿದ್ದರು. ಸುಮಿತ್ರಾ ನ್ಯಾಮಗೌಡ, ಆಡಳಿತಾಧಿಕಾರಿ ಬಸವರಾಜ ನ್ಯಾಮಗೌಡ, ಪ್ರಾಚಾರ್ಯ ಡಾ.ಎನ್.ಎಂ.ರೊಳ್ಳಿ ಸಹಿತ ಹಲವರು ಇದ್ದರು.

ನಂತರ ವಿದ್ಯಾರ್ಥಿಗಳಿಂದ ದೇಶಭಕ್ತಿ ಗಾಯನ, ನೃತ್ಯ, ಯೋಗ ಮತ್ತು ಸ್ಕೇಟಿಂಗ ಪ್ರದರ್ಶನ ಸಹಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಇದೇ ಸಂದರ್ಭದಲ್ಲಿ ರಾಯಲ್ ಕ್ರಿಕೆಟ್ ಕ್ಲಬ್ ಮೂಲಕ ಕ್ರಿಕೆಟ್ ತರಬೇತಿ ಉದ್ಘಾಟನೆಗೊಂಡಿತು.

# ಹುಲ್ಯಾಳ ಗ್ರಾ.ಪಂ.ದಲ್ಲಿ 78ನೇ ವರ್ಷದ ಧ್ವಜಾರೋಹಣ



**ಜಮಖಂಡಿ :** ತಾಲೂಕಿನ ಹುಲ್ಯಾಳ ಗ್ರಾಮದ ಗ್ರಾಮ ಪಂಚಾಯತ ಆವರಣದಲ್ಲಿ ಗುರುವಾರ 78ನೇ ವರ್ಷದ ಧ್ವಜಾರೋಹಣ ಸಂಭ್ರಮದಿಂದ ಜರುಗಿತು. ಶಾಲಾ ವಿದ್ಯಾರ್ಥಿಗಳಿಂದ ವಿಶೇಷ ಸಂಭ್ರಮ ದೇಶಾಭಿಮಾನ ಮೆರಗು ಹೆಚ್ಚಿಸಿತು.

ಇದೇ ಸಂದರ್ಭದಲ್ಲಿ ಗ್ರಾ.ಪಂ.ಅಧ್ಯಕ್ಷೆ ದಾನಮ್ಮಾ ಹಿರೇಮಠ, ಉಪಾಧ್ಯಕ್ಷೆ ಸವಿತಾ ಸುರೇಶ ದೊಡವಾಡ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಸುರೇಶ ಕಡಪಟ್ಟಿ, ಸದಸ್ಯರಾದ ಮುತ್ತಪ್ಪ ಸೊನ್ನದ, ಉಮೇಶ ಕೋರಿ, ಮಹಾದೇವ ಗುಡೆನ್ನವರ ಸಹಿತ ಹಲವರು ಇದ್ದರು.

# ಸಮಾಜಮುಖಿಯಾದ ಜನೋದ್ದಾರ ಪರವಾದ ಪಯಣದಲ್ಲಿ ಬೀಳೂರು ಅಜ್ಜನವರೆ ಪ್ರೇರಕ ಶಕ್ತಿ : ಡಾ. ವೀರಣ್ಣ ಚರಂತಿಮಠ

**ಬಾಗಲಕೋಟೆ :** ಸತ್ಯ, ನಿಷ್ಠೆ, ಪ್ರಾಮಾಣಿಕತೆಯ ಸಮಾಜಮುಖಿಯಾದ ಜನೋದ್ದಾರ ಪರವಾದ ಈ ಪಯಣದಲ್ಲಿ ಬೀಳೂರು ಅಜ್ಜನವರ ಶಕ್ತಿಯೆ ನನಗೆ ಪ್ರೇರಕವಾಗಿದೆ ಎಂದು ಮಾಜಿ ಶಾಸಕರು, ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಸಂಸ್ಥಾಪಕದಿನಾಚಾರಣೆಹಾಗೂಶ್ರೀಬೀಳೂರುಗುರುಬಸವ ಮಹಾಸ್ವಾಮಿಗಳ ಶ್ರಾವಣ ಮಾಸದ ಉತ್ಸವವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಬೀಳೂರ ಗುರುಬಸವ ಮಹಾಸ್ವಾಮಿಗಳ ಧರ್ಮಭಾನುವಿನ ತತ್ವಾದರ್ಶಗಳ ಅಮರ ಅಭಿದಾನದಲ್ಲಿ ಉದಯವಾದ ಬಿ.ವಿ.ವಿ.ಸಂಘದ ಶಿಕಷಣ ಸೇವೆ ನೀರಂತರ, ಅರಿವು ಆಚಾರ ಸಮನ್ವಿತವಾದ ಲೋಕ ಶಿಕ್ಷಣಗಳಾದ ಜ್ಞಾನ-ವಿಜ್ಞಾನ, ತಂತ್ರಜ್ಞಾನ, ಗಣಕ ವಿಜ್ಞಾನ, ವೈದ್ಯ ವಿಜ್ಞಾನ, ಔಷಧಿ ವಿಜ್ಞಾನ, ಸೇವಾ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಸೇವಾ ಪಥದಲ್ಲಿ ಸಾಲುದೀಪಗಳನ್ನು ಹಚ್ಚುತ್ತಾ ಮುನ್ನೆಡೆದಿದೆ, "ನೀವು ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಕ್ರೀಯೆ ಮಾಡೇನು ನಿಮ್ಮ ಸೊಮ್ಮಿಂಗೆ ಸಲಿಸುವೇನು, ನಿಮ್ಮಾಣೆ ಕೂಡಲಸಂಗಮದೇವಾ"ಎಂಬ ಬಸವಣ್ಣನವರ



ಆಣೆನುಡಿಯಂತೆ ಸಂಘವು ಅರಿವವನ್ನು ಬಿತ್ತುವುದೇ ನಿಜವಾದ ಪೂಜೆಯಂದು ನಂಬಿ ನಡೆದಿರುವ, ಹಿಂದಿನ ಮಹಾಚೇತನವೇ ಬೀಳೂರು ಶ್ರೀಗಳು ಎಂದರು.

ನಿರ್ವತ್ತ ಪ್ರಾಚಾರ್ಯರಾದ ಎ.ಎಸ್. ಪಾವಟೆ ಮಾತನಾಡಿ ಶ್ರೀ ಬೀಳೂರು ಗುರು ಬಸವ ಮಹಾಸ್ವಾಮಿಗಳು ವಿದ್ಯಾರ್ಥಿಗಳೇ ದೇವರು, ವಿದ್ಯಾಲಯವೇ ದೇವಾಲಯ ಶಿಕ್ಷಣ ಪ್ರಸಾರವೇ ಲಿಂಗಪೂಜೆ ಎಂದು ತಮ್ಮ ಜೀವನವನ್ನು ಸದೃಢ ಸಮಾಜ ನಿರ್ಮಾಣ ಮತ್ತು ಶಿಕ್ಷಣ ಪ್ರಸಾರಕ್ಕಾಗಿ ಮೀಸಲಿರಿಸಿದ ಭಕ್ತಾನುರಾಗಿ ಅವರನ್ನು ಸ್ತುತಿಸುವ ಈ ದಿನ ಅತ್ಯಂತ ಮಹತ್ವದ್ದಾಗಿದೆ ಎಂದರು.

ಪ್ರಾಚಾರ್ಯ ಡಾ.ಅರುಣ ಹೂಲಿ ಮಾತನಾಡಿ ಶ್ರೀ ಬೀಳೂರು ಗುರು ಬಸವ ಮಹಾಸ್ವಾಮಿಗಳು ಕಟ್ಟಿ ಬೆಳೆಸಿದ ಈ ಸಂಘ ಇಂದು ವಿಶ್ವವಿಖ್ಯಾತವಾಗಿದೆ ಅವರ ಸನ್ಮಾರ್ಗದಲ್ಲಿ ಸಂಘದ ಕಾರ್ಯಾಧ್ಯಕ್ಷರದ ಡಾ.ವೀರಣ್ಣ ಚರಂತಿಮಠರ ಅವಿರತ ಶ್ರಮದಿಂದ ಇಂದು ದೇಶದ ಶ್ರೇಷ್ಠ ವಿದ್ಯಾ ಸಂಸ್ಥೆಗಳ ಸಾಲಿನಲ್ಲಿ ನಿಂತಿದ್ದೇವೆ ಎಂದರು.

ಡಾ.ರವಿ.ಎಸ್.ಕೋಟೆಣ್ಣವರ ಸ್ವಾಗತಿಸಿ ಪರಿಚಯಿಸಿದರು. ಕುಮಾರಿ ಭಾಗ್ಯಾ ವಂದಿಸಿದರು. ಕುಮಾರಿ ಸೃಷ್ಠಿ ತೋಟದ ಕಾರ್ಯಕ್ರಮ ನಿರೂಪಿಸಿದರು.ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಸಾಸನೂರ, ಗುರುಬಸವ ಸೂಳಿಬಾವಿ, ಕುಮಾರ ಹಿರೇಮಠ, ಬಿ.ಎಸ್.ಬೋಳಿಶೆಟ್ಟಿ, ಹಾಗೂ ಬವಿವಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ವಚನ ವಾಚನ ಹಾಗೂ ಭಕ್ತಿ ಗೀತೆಗಳ ಗಾಯನ ಜರುಗಿದವು.

# ಕುಮಾರೇಶ್ವರ ಆಸ್ಪತ್ರೆಯಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

## ಕ್ಯಾನ್ಸರ್‌ರೋಗಗುಣಪಡಿಸಬಹುದಾದಕಾಯಿಲೆ:ಅಶೋಕಸಜ್ಜನ(ಬೇವೂರ)

**ಬಾಗಲಕೋಟೆ :** 'ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಹೊಸ ಅವಿಷ್ಕಾರಗಳಾಗಿವೆ. ಕಾಯಿಲೆಗಳಿಗೆ ಸೂಕ್ತ ಔಷಧಿಗಳನ್ನು ಕಂಡುಹಿಡಿಯಲಾಗಿದೆ. ಸಂಶೋಧನೆಯ ಪರಿಣಾಮ ಕ್ಯಾನ್ಸರ್ ರೋಗ ಕೂಡ ಈಗ ಗುಣಪಡಿಸಬಹುದಾದ ಕಾಯಿಲೆಯಾಗಿದೆ' ಎಂದು ಬಿ.ವಿ.ವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಅಶೋಕ ಎಮ್.ಸಜ್ಜನ (ಬೇವೂರ) ಅವರು ಅಭಿಪ್ರಾಯ ವ್ಯಕ್ತಪಡಿಸಿದರು.



ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆ, ಪಿ.ಎಮ್.ಎನ್. ಎಮ್ ಡೆಂಟಲ್ ಕಾಲೇಜು ಮತ್ತು ಹುಬ್ಬಳ್ಳಿಯ ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಜೆಸ್ (ಎಚ್.ಸಿ.ಜಿ) ಸಹಯೋಗದಲ್ಲಿ ಆಯೋಜಿಸಲಾದ ಉಚಿತ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು 'ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರ ಕಾಳಜಿ ಮತ್ತು ಪ್ರಯತ್ನದ ಪರಿಣಾಮ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಅಗತ್ಯವಾದ ಎಲ್ಲ ಸೌಲಭ್ಯಗಳು ದೊರೆಯುವಂತಾಗಿದೆ. ಸಾರ್ವಜನಿಕರು ಗಮನಿಸಬೇಕಾದ ಸಂಗತಿ ಎಂದರೆ ಎಲ್ಲ ಪ್ರಕಾರದ ಗಡ್ಡೆಗಳನ್ನು ಕ್ಯಾನ್ಸರ್ ಎಂದು ಪರಿಗಣಿಸಲಾಗದು. ಸೂಕ್ತ ತಪಾಸಣೆಯ ನಂತರವೇ ಕ್ಯಾನ್ಸರ್ ಕಾಯಿಲೆಯನ್ನು ಪತ್ತೆಹಚ್ಚಿ ಚಿಕಿತ್ಸೆ ನೀಡಲಾಗುವುದು. ಕ್ಯಾನ್ಸರ್ ರೋಗ ಬರದಂತೆ ತಡೆಗಟ್ಟಲು ಜೀವನಶೈಲಿ ಮತ್ತು ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳುವುದು ಅಗತ್ಯವಾಗಿದೆ. ಈ ಕುರಿತು ವೈದ್ಯರು ಕೂ ಡಾ ಜನರಲ್ಲಿ ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ. ಹುಬ್ಬಳ್ಳಿಯ ಎಚ್.ಸಿ.ಜಿ ಕ್ಯಾನ್ಸರ್ ಕೇಂದ್ರದೊಂದಿಗೆ ಒಪ್ಪಂದ ಮಾಡಿಕೊಂಡಿರುವ ಕುಮಾರೇಶ್ವರ ಆಸ್ಪತ್ರೆಯಲ್ಲಿ ಎಲ್ಲ ಪ್ರಕಾರದ ಕ್ಯಾನ್ಸರ್ ಕಾಯಿಲೆಗಳಿಗೆ ಚಿಕಿತ್ಸೆ ಲಭ್ಯವಿದೆ. ಡೆಂಟಲ್ ಕಾಲೇಜಿನಲ್ಲಿ ಬಾಯಿ ಕ್ಯಾನ್ಸರ್ ಚಿಕಿತ್ಸೆಗಾಗಿ ಸುಮಾರು 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವೈದ್ಯಕೀಯ ಉಪಕರಣವನ್ನು ಖರೀದಿಸಲಾಗಿದೆ ಮತ್ತು ಎಲ್ಲ ಚಿಕಿತ್ಸೆಗಳನ್ನು ಮಾಡಲಾಗುತ್ತಿದೆ' ಎಂದು ಹೇಳಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿ.ವಿ.ವಿ ಸಂಘದ ಗೌರವಾನ್ವಿತ ಸದಸ್ಯರಾದ ರಾಜು ಪಾಟೀಲ, ಮೆಡಿಕಲ್ ಕಾಲೇಜಿನ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಡಾ.ನಾರಾಯಣ ಮುತಾಲಿಕ, ಡೆಂಟಲ್ ಕಾಲೇಜಿನ ಡಾ.ಕಾಶಿನಾಥಅರಬ್ಬಿಮತ್ತುವಿವಿಧ ವಿಭಾಗಗಳ ವೈದ್ಯರು ಉಪಸ್ಥಿತರಿದ್ದರು. ಶಿಬಿರಕ್ಕೆ ಬಾಗಲಕೋಟೆ ಸೇರಿದಂತೆ ನೆರೆಯ ಜಿಲ್ಲೆಗಳಿಂದ ತಪಾಸಣೆಗಾಗಿ ಸುಮಾರು 100 ಕ್ಕೂ ಹೆಚ್ಚು ರೋಗಿಗಳು ಆಗಮಿಸಿದ್ದರು. ಎಚ್.ಸಿ.ಜಿ ಕ್ಯಾನ್ಸರ್ ಕೇಂದ್ರದ ತಜ್ಞವೈದ್ಯರಾದ ಡಾ.ಮಿಲಿಂದ ಶೆಟ್ಟಿ, ಕುಮಾರೇಶ್ವರ ಆಸ್ಪತ್ರೆಯ ಒ.ಬಿ.ಜಿ ವಿಭಾಗದ ಡಾ.ಆಶಾಲತಾ ಮಲ್ಲಾಪೂರ, ಸರ್ಜರಿ ವಿಭಾಗದ ಡಾ.ಈಶ್ವರ ಕಲಬುರ್ಗಿ, ಇ.ಎನ್.ಟಿ ವಿಭಾಗದ ಡಾ. ಸಿ.ಎಸ್. ಹಿರೇಮಠ, ಡೆಂಟಲ್ ಕಾಲೇಜಿನ ಡಾ.ಪ್ರವೀಣ ರಾಮದುರ್ಗ, ಡಾ.ಗಂಗಾಧರ ಅಂಗಡಿ ಮತ್ತು ಡಾ.ಸಂತೋಷ ಗುಡಿ ಅವರು ಶಿಬಿರದಲ್ಲಿ ಪಾಲ್ಗೊಂಡ ರೋಗಿಗಳ ಕಾಯಿಲೆ ತಪಾಸಣೆ ಮಾಡಿದರು.

# ಅಂತಾರಾಷ್ಟ್ರೀಯಮುಕ್ತಕರಾಟೆಚಾಂಪಿಯನ್‌ಶಿಪ್: ತೇಜಸ್‌ಅಂತರರಾಷ್ಟ್ರೀಯವಸತಿಶಾಲೆಯವಿದ್ಯಾರ್ಥಿಗಳು



**ಬಾಗಲಕೋಟೆ :** ಅಂತಾರಾಷ್ಟ್ರೀ0ಯ ಮುಕ್ತ ಕರಾಟೆ ಚಾಂಪಿ0ಯನ್‌ಶಿಪ್‌ನಲ್ಲಿ ಬಾಗಲಕೋಟೆ ಜಿಲ್ಲೆ0ಯ ಪ್ರಖ್ಯಾತ, ತೇಜಸ್ ಅಂತರರಾಷ್ಟ್ರೀ0ಯ ವಸತಿ ಶಾಲೆ0ಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳು ಕರಾಟೆ0ಯಲ್ಲಿ ತಮ್ಮ ಶ್ಲಾಘನೀ0ಯ ಕೌಶಲ್ಯಗಳನ್ನು ಪ್ರದರ್ಶಿಸಿದರು. ಕುಮಿಟೆ ಮತ್ತು ಕಟಾ ಸ್ಕಿಲ್ಸ್‌ನಲ್ಲಿ ಶಾಲೆ0ಯ ವಿದ್ಯಾರ್ಥಿಗಳು 15 ಟ್ರೋಫಿಗಳು ಮತ್ತು 2 ಪದಕಗಳನ್ನು ಪಡೆದು ಶಾಲೆಗೆ, ಜಿಲ್ಲೆಗೆ ಮತ್ತು ರಾಜ್ಯಕ್ಕೆ ಹೆಸರು ತಂದಿದ್ದಾರೆ. ತರಬೇತುದಾರರಾದ ಶ್ರೀ ರಾಜ್‌ಪೂತ್ ಅವರ ಪ್ರಕಾರ 800 ವಿದ್ಯಾರ್ಥಿಗಳು ಭಾಗವಹಿಸುವದರೊಂದಿಗೆ ಭಾರತದ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು, ಹಾಗೂ ಭೂತಾನ್, ಶ್ರೀಲಂಕಾ, ನೇಪಾಳ, ದೇಶಗಳಿಂದಲೂ ವಿದ್ಯಾರ್ಥಿಗಳು ಆಗಮಿಸಿದ್ದರು ಎಂದು ತಿಳಿಸಿದ್ದಾರೆ.

ಶಾಲೆ0ಯ ವಿದ್ಯಾರ್ಥಿಗಳ ಸ್ಪರ್ಧೆ0ಯು ನಿಜವಾಗಿ0ಯೂ ಮುಂಚೂಣಿಹಂತದಲ್ಲಿತ್ತುಮತ್ತುಅವರುಸ್ಪರ್ಧಿಸಿದಾಗ ವಿದ್ಯಾರ್ಥಿಗಳಿಗಾಗಿ ಹೊಸ ಆ0ಯಾಮಗಳನ್ನು ತೆರೆ0ಯಲಾಯಿತು ಎಂದು ಹೇಳಿದರು. ಶಾಲೆ0ಯ ಪ್ರಾಂಶುಪಾಲರಾದ ಶ್ರೀ ಸಚಿನ್ ಬಾತ್ರಾ ಮತ್ತು ಸಂಸ್ಥೆ0ಯ ಅಧ್ಯಕ್ಷೆ ಮಾಧುರಿ ಮುಧೋಳ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿ, ರಾಷ್ಟ್ರವನ್ನು ಸದೃಢ ಮತ್ತು ಅಭಿವೃದ್ಧಿ ಪಡಿಸುವ ಜವಾಬ್ದಾರಿ0ಯೊಂದಿಗೆ ಉತ್ತಮ, ಆರೋಗ್ಯಕರ ಮತ್ತು ಶಿಸ್ತಿನ ಜೀವನವನ್ನು ನಡೆಸುವಂತೆ ಸಂದೇಶವನ್ನು ನೀಡಿದರು.

# ಸಾಲ ಸೌಲಭ್ಯಕ್ಕಾಗಿ ಅರ್ಜಿ

**ಬಾಗಲಕೋಟೆ:** ಕರ್ನಾಟಕಅಲ್ಪಸಂಖ್ಯಾತರಅಭಿವೃದ್ಧಿ ನಿಗಮದ ವತಿಯಿಂದ ಪ್ರಸಕ್ತ ಸಾಲಿಗೆ ಮಹಿಳಾ ಫಲಾನುಭವಿಗಳಿಗೆ ಸ್ವ-ಸಹಾಯ ಗುಂಪುಗಳಿಗೆ ವಿವಿಧ ರೀತಿಯ ಸ್ವಯಂ ಉದ್ಯೋಗ ಚಟುವಟಿಕೆಗಳಲ್ಲಿತೊಡಗಿಸಿಆರ್ಥಿಕವಾಗಿಸ್ವಾವಲಂಭಿಗಳನ್ನಾಗಿ ಮಾಡಲು ಆರ್ಥಿಕ ಸಂಸ್ಥೆಯಿಂದ ಪಡೆಯುವ ಸಾಲದ ಘಟಕವೆಚ್ಚಕ್ಕೆ ಶೇ.50 ಅಥವಾ 2 ಲಕ್ಷದವರೆಗೆ ಸಹಾಯಧನ ಒದಗಿಸಲು ಅರ್ಹ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಸಮುದಾಯದವರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವವರು ಈಗಾಗಲೇ ನಿಗದಿಂದ ಕುಟುಂಬದ ಸದಸ್ಯರು ಸಾಲ ಸೌಲಭ್ಯ ಪಡೆದಿರಬಾರದು. ಅರ್ಜಿಯನ್ನು ಆನ್‌ಲೈನ್ www.kmdconline.karnataka.gov.in ಮೂಲಕ ಆಗಸ್ಟ31ರೊಳಗಾಗಿಸಲ್ಲಿಸಬೇಕು.ಹೆಚ್ಚಿನಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೌಲಾನಾ ಆಜಾದ್ ಭವನ, ಜಿಲ್ಲಾಡಳಿತ ಭವನದ ಆವರಣ, ನವನಗರ, ಬಾಗಲಕೋಟೆ ದೂಸಂ.08354-236255 ಇವರನ್ನು ಸಂಪರ್ಕಿಸುವಂತೆ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನರಲ್ ತಿಮ್ಮಯ್ಯ ಪ್ರಶಸ್ತಿಗೆ ಅರ್ಜಿ

**ಬಾಗಲಕೋಟೆ :** ಪ್ರಸಕ್ತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ ಜನರಲ್ ಕೆ.ಎಸ್. ತಿಮ್ಮಯ್ಯ ನಗದು ಪ್ರಶಸ್ತಿ ಅನುದಾನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ನಿಗದಿತಅರ್ಜಿನಮೂನೆಹಾಗೂಹೆಚ್ಚಿನಮಾಹಿತಿಗಾಗಿ ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಸೆಕ್ಟರ ನಂ.22 ಪೊಲೀಸ್ ಪ್ಯಾಲೇಸ್ ಹತ್ತಿರ, ನವನಗರ, ಬಾಗಲಕೋಟೆ ಇವರ ಕಾರ್ಯಾಲಯದಿಂದ ಶುಲ್ಕ ರಹಿತವಾಗಿ ಪಡೆದು ಅಕ್ಟೋಬರ 31 ರೊಳಗಾಗಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-235434ಗೆ ಸಂಪರ್ಕಿಸಬಹುದಾಗಿದೆ.

# ನಮ್ಮೂರ ಹೆಮ್ಮೆ ನಮ್ಮೂರ ಹೆಮ್ಮೆಯ ಕಲಾವಿದರು




**ಮುದ್ದೇಬಿಹಾಳ :** ಮುದ್ದೇಬಿಹಾಳ ತಾಲೂಕಿನಲ್ಲಿ ತನ್ನದೇ ಆದ ಛಾಪ್ ಮೂಡಿಸಿದೆ ಕಲಾವಿದರ ತಂಡವನ್ನು ಟೈಮ್ಸ್ ಪತ್ರಿಕೆ ಬಳಗದವರು ನೋಡಿ ನಿಜವಾಗಲೂ ಹೆಮ್ಮೆ ವ್ಯಕ್ತಪಡಿಸಿದರು. ಇವರು ಅದ್ಭುತ ಕಲಾವಿದರು.

ಇವರ ಕಲಾಪ್ರದರ್ಶನ ರಾಜ್ಯಮಟ್ಟದಲ್ಲಿ ಆಗ್ಬೇಕಾಗಿದೆ ಎಂದು ನಮ್ಮ ಪ್ರತಿನಿಧಿ ರಿಯಾಜ್ ಮುಲ್ಲಾರವರು ಹೇಳಿದರು.

ಕಲೆ ಎಂಬುದು ಒಂದು ಉದ್ಯೋಗವಲ್ಲ ಅದು ಆತ್ಮಸಾಕ್ಷಿಯಾಗಿ ತನ್ನ ಅಂತರಾಳದ ಕಲೆಯನ್ನು ಪ್ರಸ್ತುತಪಡಿಸುವ ಒಂದು ವ್ಯವಸ್ಥೆ ಎಂದು ಹೇಳಬಹುದು.

ಮೊದಲನೇದಾಗಿ ಪ್ರಾಥಮಿಕ ಶಾಲಾ ಶಿಕ್ಷಕ ಟಿ.ಡಿ. ಲಮಾಣಿ ಶಿಕ್ಷಕರು ಇವರು ಅದ್ಭುತ ಕಲಾವಿದರು ಗಾಯಕರು ಎಂಬುದು ಈ ದಿನ ಪತ್ರಕರ್ತರ ಕಾರ್ಯಕ್ರಮದಲ್ಲಿ ನೋಡಿದ್ದು. ನಿಜವಾಗಲೂಆಶ್ಚರ್ಯವಾದರೂ ಸತ್ಯವಾಗಿದೆ. ಮುದ್ದೇಬಿಹಾಳ ತಾಲೂಕಿನ ವಿವಿಧ ಸರ್ಕಾರಿ ಕಾರ್ಯಕ್ರಮದಲ್ಲಿ ಕಾರ್ಯಕ್ರಮ ನಿರೂಪಣೆ ಮಾಡುತ್ತಾರೆ ಎಂದು ಭಾವಿಸಲಾಗಿತ್ತು.

ಆದರೆ ಇವರು ನಿಜವಾಗಲೂ ಅದ್ಭುತ ಕಲಾವಿದರು.

ಅದೇ ರೀತಿ ದೊಡ್ಡಮನಿ ಎಂಬ ಶಿಕ್ಷಕರು ಹಾಡಿದ ಹಾಡು ಮತ್ತು ಅವರ ದಾಟಿ ಅವರ ಕಲೆ ಮೆಚ್ಚುವಂತಹದ್ದು.

ಇಂತಹ ಕಲಾವಿದರು ನಮ್ಮ ತಾಲೂಕಿನಲ್ಲಿ ಇದ್ದಾರೆಯೇ ಅನಿಸುತ್ತಿತ್ತು.

ಇದೇ ರೀತಿ ಮಹಿಳಾ ಗಾಯಕಿ ಶ್ರೀಮತಿ ದೀಪಾ ಹೆಸರಿನಂತೆ ತಮ್ಮ ಕಂಠದಿಂದ ಸ್ವರಗಳ ಮೂಲಕ ದೀಪ ಬೆಳಗಿಸಿ ಕತ್ತಲೆಯಿಂದ ಬೆಳಕಿನ ಕಡೆ ಕೊಂಡು ವಯ್ಯುವ ಕೋಗಿಲೆಕಂಠದಯುವಕಲಾವಿದೆ ಶ್ರೀಮತಿ ದೀಪಾ ಜಿಲ್ಲೆಯ ವಿವಿಧ ಭಾಗದಲ್ಲಿ ತಮ್ಮ ಕೋಗಿಲೆ ಕಂಠದ ಧ್ವನಿಯಿಂದ ಆಕರ್ಷಣೆಯ ಸುಮಧುರ ಸಂಗೀತ ನೀಡುವ ಅದ್ಭುತ ಕಲಾವಿದೆಯೆಂದು ಹೇಳಬಹುದು.ಈಕಲಾತಂಡಕು-ರಿತು ಮುಂದೊಂದು ದಿನ ವಿಶೇಷ ಲೇಖನ ಪ್ರಸ್ತಾಪ ಮಾಡಲಿದ್ದೇವೆ. ಇವರ ಕಲೆಗೆ ಪ್ರೋತ್ಸಾಹ ಮತ್ತು ಪ್ರಚಾರ ಬೆನ್ನು ತಟ್ಟುವ ಕಾರ್ಯ ನಮ್ಮೂರ ಹೆಮ್ಮೆಯ

ನಮ್ಮೂರ ಕಲಾವಿದರ ಬಗ್ಗೆ ಆಗಬೇಕಾಗಿದೆ. ಇವರೊಂದಿಗೆ ಕೈಜೋಡಿಸಿದ ಕುಂಟೋಜಿ ಸೌಂಡ್ ಸಿಸ್ಟಮ್ ಕಾರ್ಯ ನಿಜವಾಗಲೂ ಒಂದು ಸಂಗೀತ ಕಾರ್ಯಕ್ರಮ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು

ಹೇಳಬಹುದು. ಮುಂಬರುವ ದಿನಮಾನಗಳಲ್ಲಿ ನಾವೆಲ್ಲರೂ ಇವರ ಬೆನ್ನೆಲುಬಾಗಿ ನಿಂತು ಬೆಂಬಲಿಸೋಣ.

# ಮುಡಾ ಹಗರಣ; ರಾಜ್ಯಪಾಲರ ಕಚೇರಿ ಕೇಂದ್ರ ಮತ್ತು ವಿರೋಧಪಕ್ಷಗಳ ಕೈಗೊಂಬೆಯಾಗದಿರಲಿ: ವೆಲ್ಫೇರ್ ಪಾರ್ಟಿ

**ಬೆಂಗಳೂರು :** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲ ಥ್ಯಾವರ್ ಚಂದ್ ಗೆಹಲೋತ್ ಅನುಮತಿ ನೀಡಿರುವುದು ಖಂಡನೀಯ. ಮುಡಾ ಹಗರಣದಲ್ಲಿ ಭಾ-ಗಿಯಾದ ಎಲ್ಲ ಪಕ್ಷದವರನ್ನು ತನಿಖೆ ನಡೆಸಿ ವಾಸ್ತವಾಂಶವನ್ನು ಬಹಿರಂಗಪಡಿಸಬೇಕು. ರಾಜ್ಯಪಾಲರ ಕಚೇರಿ ಕೇಂದ್ರ ಮತ್ತು ವಿರೋಧ ಪಕ್ಷಗಳ ಕೈಗೊಂಬೆಯಾಗದಿರಲಿ " ಎಂದು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಇದರ ಕರ್ನಾಟಕ ರಾಜ್ಯದ ಅಧ್ಯಕ್ಷರಾದ ಅಡ್ವಕೇಟ್ ತಾಹೇರ್ ಹುಸೇನ್ ಅಭಿಪ್ರಾಯ ಪಟ್ಟಿದ್ದಾರೆ. ಯಾಕೆಂದರೆ ಇದು ಬಹುಮತವಿರುವ ಸರಕಾರವನ್ನು ದುರ್ಬಲಗೊಳಿಸಲು ವಿರೋಧ ಪಕ್ಷ ಮತ್ತು ಕೇಂದ್ರ ಸರಕಾರ ಹೂಡಿದ ತಂತ್ರದ ಪ್ರಕಾರ ರಾಜ್ಯಪಾಲರು ವರ್ತಿಸಿದ್ದಾರೆ ಎಂಬ ಅನುಮಾನ ಜನರಲ್ಲಿ ದಟ್ಟವಾಗಿದೆ. ಸಂವಿಧಾನದ 163 ನೇ ವಿಧಿಯನ್ವಯ ಮಂತ್ರಿ ಪರಿಷತ್ತಿನ ಸಲಹೆಯನ್ನು ರಾಜ್ಯಪಾಲರು ತಿರಸ್ಕರಿಸುವಂತಿಲ್ಲ. ಆದರೆ ರಾಜ್ಯಪಾಲರು ಅದನ್ನು ತಿರಸ್ಕರಿಸಿ ತನಿಖೆಗೆ ತರಾತುರಿಯಲ್ಲಿ ಅನುಮತಿಸಿದ್ದಾರೆ. ಇದು ಖಂಡನೀಯ ಎಂದು ಹೇಳಿದ ಅವರು ಕೊಳಕನ್ನು ಮೆತ್ತಿಕೊಂಡವರೇ ಭ್ರಷ್ಟಾಚಾರ ದ ಬಗ್ಗೆ ಉಪದೇಶ ನೀಡುತ್ತಿದ್ದಾರೆ. ವಿರೋಧ ಪಕ್ಷಗಳ ಉತ್ಸಾಹ ನೋಡುವಾಗ ಇದೊಂದು ಸರಕಾರವನ್ನು ಅಸ್ಥಿರ ಗೊಳಿಸುವ ಷಡ್ಯಂತ್ರದಂತೆ ತೋರುತ್ತದೆ. ರಾಜ್ಯಪಾಲರು ಒಂದು ಪಕ್ಷದ ವಕ್ತಾರರಂತೆ ವರ್ತಿಸಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆ-ಯಾಗಿದೆ ಎಂದೂ ಅವರು ಹೇಳಿದರು.

# ಶ್ರೇಷ್ಠ ವೈದ್ಯ ಪ್ರಶಸ್ತಿ ಪಡೆದ ಹಿರಿಯ ವೈದ್ಯಾಧಿಕಾರಿರವರಿಗೆ ನವ ನಿರ್ಮಾಣ ಸೇನೆಯಿಂದ ಸನ್ಮಾನ

**ನಿಡಗುಂದಿ :** ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ಹಿರಿಯ ವೈದ್ಯಾಧಿಕಾರಿಗಳಾದ ಡಾ. ಪ್ರಕಾಶ್ ಗೋಟ್ಯಂಡ್ಕಿ ಅವರ ವೈದ್ಯಕೀಯ ಸೇವೆಗಾಗಿ ಶ್ರೇಷ್ಠ ವೈದ್ಯ ಪ್ರಶಸ್ತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೀಡಿ ಗೌರವಿಸಿದೆ. ಇದನ್ನು ಅರಿತು ಮತ್ತು ಇವರ ಪ್ರಾಮಾಣಿಕ ಸೇವೆಯನ್ನು ಮನಗಂಡು ಕರ್ನಾಟಕ ನವ ನಿರ್ಮಾಣ ಸೇನೆ ನಿಡಗುಂದಿ ತಾಲೂಕ ಘಟಕದ ವತಿಯಿಂದ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಚಂದ್ರಶೇಖರ್ ಹಳಮನಿ ಅಧ್ಯಕ್ಷರು ಕರ್ನಾಟಕ ನವನಿರ್ಮಾಣ ಸೇನೆ ತಾಲೂಕ ಘಟಕ ನಿಡಗುಂದಿ,ಹೆಚ್ ಆರ್ ನದಾಫ್ ಉಪಾಧ್ಯಕ್ಷರು ಕರ್ನಾಟಕ ನವನಿರ್ಮಾಣ ಸೇನೆ ತಾಲೂಕ ಘಟಕ



ನಿಡಗುಂದಿ,ರಹಮಾನ ಮಕಾಂದಾರ ನಗರ ಘಟಕದ ಅಧ್ಯಕ್ಷರು,ಸಂತೋಷ ಕಡಿ,ಮಸ್ತಾನ ಪೆಂಡಾರಿ,ಆಶೀಫ್ ನದಾಫ್,ಯಾಸೀನ ಚಪ್ಪರಬಂದ,ಮುತ್ತು ಚಟ್ಟೇರ,ಆಶೀಫ ಬಿಲಕೇರಿ,ಬಾವಾಸಾಬ ನಿಡಗುಂದಿ ಸೇರಿದಂತೆ ಹಾಜರಿದ್ದರು.

# ಗನ್ನು ತೋರಿಸಿದವರಿಗೆ ಪೆನ್ನು ಮೂಲಕ ಉತ್ತರ ಕೊಡುವ ಪ್ರವೃತ್ತಿ ಪತ್ರಕರ್ತರದಾಗಬೇಕು – ಜಿ.ಟಿ.ಘೋರ್ಪಡೆ

**ವರದಿ:ಸಾಗರ ಉಕ್ಕಲಿ**

**ಮುದ್ದೇಬಿಹಾಳ :** ಯಾರೊ ಗನ್ನು ತೋರಿಸಿದರೆ ಪತ್ರಕರ್ತ ಪೆನ್ನು ತೋ-ರಿಸುವ ಮೂಲಕ ಆ ಗನ್ನಿಗೆ ಉತ್ತರ ನೀಡುವ ಧೈರ್ಯಶಾಲಿಯಾಗಬೇಕು. ಅಂಜುವ ಮನೋಭಾವ ಇದ್ದರೆ ಪತ್ರಿಕಾ ವೃತ್ತಿಯಲ್ಲಿಅಂತವರುಬರಬೇಡಿಎಂದು ಹಿರಿಯ ಪತ್ರಕರ್ತರ ಜಿ.ಟಿ.ಘೋರ್ಪಡೆ ಹೇಳಿದರು. ಅವರು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣದ ರಾಘವೇಂದ್ರ ಮಂಗಲ ಭವನದಲ್ಲಿ ಶನಿವಾರ ಜರುಗಿದ ತಾಳಿಕೋಟಿ ಮುದ್ದೇಬಿಹಾಳ ತಾಲ್ಲೂಕು ಪತ್ರಕರ್ತರ ಸಂಘದ ವತಿಯಿಂದ ಆಯೋಜನೆ ಮಾಡಿದ ಪತ್ರಿಕಾ ದಿನಾಚರಣೆ ಕುರಿತು ಮಾತನಾಡಿದರು.

ಅಂದು ತಾಲ್ಲೂಕಿನಲ್ಲಿ ನಾಲ್ಕೇ ಜನ ಪತ್ರಕರ್ತರು ಇದ್ದೇವೂ ಆದರೆ ನಮ್ಮ ಲೇಖಲೆಗೆ ಅಂದಿನ ಅಧಿಕಾರಿಗಳು ವರ್ಗಾವಣೆ ಅಥವಾ ಅಮಾನತ್ತು ಆಗುತ್ತಿದ್ದರು,ಸುಮಾರು 45 ವರ್ಷಗಳ ವೃತ್ತಿ ನಮ್ಮದು, ಆದರೆ ಇಂದು ಎರಡನೂರು ಜನ ಪತ್ರಕರ್ತರು ಇದ್ದರು ಊರನ್ನು ಸ್ವಚ್ಚತಾ ಗೊಳಿಸುವ ಕಾರ್ಯ ಆಗುತ್ತಿಲ್ಲ,ಅಲ್ಲದೆ ಇಲ್ಲಿ ಸಮಾಜವನ್ನು ತಿದ್ದುವ ಪತ್ರಕರ್ತರ ಕಾರ್ಯಕ್ರಮ ಇದ್ದರೂ ಸ್ಥಳೀಯ ರಾಜಕೀಯ ಮುಖಂಡರು ಬರದೆ ಇದ್ದದ್ದು ನೋಡಿದರೆ ಅವರು ನಮಗೆ ಕೊಡುವ ಗೌರವ ಹೇಗೆ ಎಂದು ತಿಳಿಯುತ್ತದೆ,ಕಾರಣ ನಿಮ್ಮ ಲೇಖನಿ ಮೂಲಕ ಉತ್ತರ ನೀಡಿದರೆ ಮಾತ್ರ



ಸಮಾಜಸುಧಾರಿಸಲುಸಾಧ್ಯವಾಗುತ್ತದೆ ಎಂದು ಅವರು ಗುಡುಗಿದರು.

ಹಿರಿಯಪತ್ರಕರ್ತ,ನ್ಯಾಯವಾದಿಕೆ.ಎಂ. ರಿಸಾಲ್ದಾರ ಮಾತನಾಡಿ: ಸಮಾಜದಲ್ಲಿ ಇಂದು ಅಕ್ರಮಗಳು ನಡೆಯುತ್ತವೆ,ಆ ಅಕ್ರಮಗಳನ್ನು ಸದೆಬಡಿದು ನೈಜವಾದ ವರದಿಗಳನ್ನು ಬಿತ್ತರಿಸುವ ಮೂಲಕ ಅಂತವರ ವಿರುದ್ಧ ಭ್ರಮಾಸ್ತ್ರ ದಂತೆ ವರದಿಗಳು ಕೆಲವೊಂದು ಪತ್ರಿಕೆಗಳಲ್ಲಿ ಮಾತ್ರ ಬರುತ್ತವೆ.ಅವರು ಇಂತಹ ನೈಜ ವರದಿಗೆ ಬ್ಲಾಕ್ ಮೇಲೆ ಆರೋಪ ಹೊರಸುತ್ತಾರೆ,ಆದರೆ ನಿಜವಾದಂತ ಪತ್ರಕರ್ತ ಯಾವುದೇ ಆರೋಪಕ್ಕೆ ಅಂಜದಂತೆ ಧೈರ್ಯದಿಂದ ಯಾರು ವರದಿಗಳನ್ನು ಬಿತ್ತರಿಸುತ್ತಾರೊ ಅಂತವರು ನಿಜವಾದಂತ ಪತ್ರಕರ್ತರು, ಪತ್ರಿಕೆ ಬೆಳೆಯಬೇಕಾದರೆ,ವಸ್ತು ನಿಷ್ಠ ವರದಿ ಮಾಡುವವರ ಸಹಕಾರ ಇದ್ದಾಗ ಮಾತ್ರ ಪತ್ರಿಕೆಗಳು ಬೆಳೆಯಲು ಸಾಧ್ಯವಾಗುತ್ತದೆ, ಕಾರಣ ಅಂತಹ ನಿಷ್ಠಾವಂತ ಪತ್ರಕರ್ತರಿಗೆ ನಮ್ಮ ಬೆಂಬಲ ಸದಾ ಇರುತ್ತದೆ. ಎಂದು ಅವರು ಹೇಳಿದರು.

ಪತ್ರಿಕಾ ಕಾರ್ಯಕ್ರಮದ ಕುರಿತು ಅರುಣ ಹೊಸಮಠ ಅವರು ಸುಧೀರ್ಘ ಉಪನ್ಯಾಸವನ್ನು ನೀಡಿದರು.

ವೇದಿಕೆ ಮೇಲೆ ಅತಿಥಿಗಳಾದ ಗುರು ತಾರನಾಳ,ನೇತಾಜಿ ನಲವಡೆ, ಎಂ.ಬಿ.ನಾವದಗಿ,ಪತ್ರಿಕಾ ಸ್ವಾತಂತ್ರ್ಯ ಹಾಗೂ ಕಾರ್ಯಕ್ರಮದ ಕುರಿತು ಮಾತನಾಡಿದರು.

ಈ ವೇಳೆ ಬಾಜಪ ಜಿಲ್ಲಾ ಕಾರ್ಯದರ್ಶಿ ಕಾಶಿಬಾಯಿ ರಾಂಪೂರ,ಸೋಮನಗೌಡ ಪಾಟೀಲ ನಡಹಳ್ಳಿ, ಅಶೋಕ ಮಣಿ,-ಅಯೂಬ್ ಮನಿಯಾರ,ಸಿಕ್ಕಂದರ ಜಾನವೇಕರ,ಪ್ರಿತಂಗೌಡ,ಎಸ್. ಕೆ.ಘಾಟಿ,ಹಾಜಿ ತೆಗ್ಗಿ,ವಿಜಯಕುಮಾರ ಉತ್ನಾಳ,ನಾಗರಾಜ ಬಂಡಿವಡ್ಡರ,ಗಿ-ರೀಶಗೌಡ ಮುರಾಳ,ಸೇರಿದಂತೆ ಉಪಸ್ಥಿತರಿದ್ದರು.

## ಕರಿಸಿದ್ದೇಶ್ವರ ದೇವಸ್ಥಾನದಲ್ಲಿ 228ನೇ ರಾಯಣ್ಣ ಜಯಂತಿ

# ರಾಯಣ್ಣ ರಾಷ್ಟ್ರ ಭಕ್ತಿ ಇಂದಿನ ಜನಾಂಗಕ್ಕೆ ಮಾದರಿ: ಸಿದ್ದು ಸವದಿ

**ಮಹಾಲಿಂಗಪುರ :** ನಮ್ಮ ದೇಶಕ್ಕೆ ಸಿಕ್ಕ ಸ್ವಾತಂತ್ರವು ಅನೇಕ ಹೋರಾಟಗಾರರ ತ್ಯಾಗ ಬಲಿದಾನದ ಶ್ರಮದ ಕೊಡುಗೆ. ಅದರಲ್ಲಿ 1824 ರಲ್ಲೇ ಬ್ರಿಟಿಷರ ಎದೆ ನಡುಗಿಸಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ದೇಶ ಭಕ್ತಿ ಇಂದಿನ ಜನಾಂಗಕ್ಕೆ ಸ್ಫೂರ್ತಿ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಸ್ಥಳೀಯ ಶ್ರೀ ಕರಿಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಕ್ರಾಂತಿ ವೀರಸಂಗೊಳ್ಳಿ ರಾಯಣ್ಣನ 228 ನೇ ಜಯಂತಿ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಚನ್ನಮ್ಮನ ಬಲ ಗೈ ಬಂಟನಾಗಿದ್ದ ರಾಯಣ್ಣ ಗೆರಿಲ್ಲಾ ಯುದ್ಧ ತಂತ್ರಗಳನ್ನು ಅಳವಡಿಸಿಕೊಂಡು



ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಸಮರ ಸಾರಿದ್ದ ವೀರ ಸೇನಾನಿಯಾಗಿದ್ದನು ಎಂದರು. ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಸಾನಿಧ್ಯವಹಿಸಿದ್ದ ಚಿಮ್ಮಡ ಪ್ರಭು ಸ್ವಾಮಿಜಿ ರಾಯಣ್ಣನ ದೇಶ ಭಕ್ತಿಗೆ ರಾಯಣ್ಣನ್ನೇ ಸಾಟಿ ಇಂದಿನ ಯುವ ಜನತೆಗೆ ಸ್ಫೂರ್ತಿಯ ಚಿಲುಮೆ, ರಾಯಣ್ಣನ ದೇಶ ಭಕ್ತಿ ಮೈಗೂಡಿಸಿಕೊಳ್ಳಬೇಕು ಎಂದರು. ಮಹೇಶ ಇಟಕನ್ನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರಸಭೆ ಮಾಜಿ ಅಧ್ಯಕ್ಷ ಜಿ.ಎಸ್.ಗೊಂಬಿ, ಬಸವರಾಜ ಮೇಟಿ, ಸಂಗಮೇಶ ಹಿಡಕಲ್, ಭೀಮಶಿ ತಿಮ್ಮಾಪುರ, ಗಂಗಾಧರ ಮೇಟಿ ಅತಿಥಿಗಳಾಗಿ ಬಾಗವಹಿಸಿದ್ದರು. ಚನ್ನಮ್ಮನ ವೇಷಧಾರಿ ಧವಳೇಶ್ವರದ ಸಮೃದ್ಧಿ ಮಹಾಲಿಂಗ ಲೋಕುರಿ ಅವಳನ್ನು ಸನ್ಮಾನಿಸಲಾಯಿತು.

ಮುಖಂಡರಾದ ಮಹಾಲಿಂಗಪ್ಪಾ ಜಕ್ಕಣ್ಣವರ, ಚಂದ್ರಪ್ಪ ಡೋಣಿ, ಕರೆಪ್ಪ ಮೇಟಿ, ಮಹಾಲಿಂಗ ಹೊಸೂರ, ಈರಪ್ಪ ಜಕ್ಕಣ್ಣವರ, ಪರಸಪ್ಪ ಬಂಡಿ, ಯಲ್ಲಪ್ಪ ಪಟ್ಟಣಕೋಡಿ, ರಾಜು ಡೋಣಿ, ಮಲ್ಲಿಕಾರ್ಜುನ ಬನಹಟ್ಟಿ, ಚಂದ್ರು ಸಂಶಿ, ಭೀರಪ್ಪ ಸಂಶಿ, ಮಹಾಲಿಂಗಪ್ಪ ಬಾಡಗಿ, ಜಟ್ಟೆಪ್ಪ ಜಕ್ಕಣ್ಣವರ, ರಾಮಣ್ಣಗೌಡ ಪಾಟೀಲ ಶ್ರೀಶೈಲ್ ಕಾರಜೋಳ, ಹಣಮಂತ ಅವಟಿ, ಮುತ್ತು ದಿವಾನ, ಕರೆಪ್ಪ ಪೂಜೇರಿ, ಶ್ರೀಶೈಲ್ ಅವಟಿ, ಮಹಾಲಿಂಗ ಲೋಕುರಿ, ಭರಮಪ್ಪ ಅವಟಿ, ವಿಜಯ ಸಂಶಿ, ಅರ್ಜುನ್ ಮೇಟಿ, ಕರೆಪ್ಪ ಹುಣಶೀಕಟ್ಟಿ ಇದ್ದರು. ಲಕ್ಷ್ಮಣ ಕಿಶೋರ ನಿರೂಪಿಸಿ-ವಂದಿಸಿದರು.

## ಅನಧಿಕೃತ ವೃತ್ತ ನಿರ್ಮಾಣ ಪ್ರಕರಣ: ರಾತ್ರೋ ರಾತ್ರಿ ತೆರವು ಕಾರ್ಯಾಚರಣೆ



**ತೇರದಾಳ :** ಇಲ್ಲಿನ ಬಸ್ ನಿಲ್ದಾಣ ಬಳಿಯ ಪಿಕೆಪಿಎಸ್ ಬ್ಯಾಂಕ್ ಎದುರಗಡೆ ಇರುವ ಪುರಸಭೆ ಜಾಗದಲ್ಲಿ ರಾತ್ರೋ ರಾತ್ರಿ ನಿರ್ಮಾಣಗೊಂಡಿದ್ದ ಸಂಗೊಳ್ಳಿ ರಾಯಣ್ಣ ವೃತ್ತವನ್ನು ಪುರಸಭೆಯವರು ರಾತ್ರೋ ರಾತ್ರಿ ತೆರವುಗೊಳಿಸುವ ಮೂಲಕ ಸಾರ್ವಜನಿಕ ವಲಯದಲ್ಲಿ ಅಚ್ಚರಿ ಪಡುವಂತೆ ಮಾಡಿದ್ದಾರೆ.

ಆ. 15ರಂದು ಬೆಳಗಾಗುವಷ್ಟರಲ್ಲಿ ಪುರಸಭೆ ಜಾಗದಲ್ಲಿ ಸಂಗೊಳ್ಳಿ ರಾಯಣ್ಣ ವೃತ್ತ ನಿರ್ಮಾಣಗೊಂಡಿತ್ತು.

ಇದು ಎಲ್ಲೆಡೆ ಚರ್ಚೆ ಶುರುವಾಗುತ್ತಿದ್ದಂತೆ ಹಾಲುಮತ ಸಮಾಜ ಬಾಂಧವರು ಬೆಳಗ್ಗೆಯಿಂದ ರಾತ್ರಿ ವರೆಗೆ ವೃತ್ತದ ಹತ್ತಿರವೇ ಕುಳತಿದ್ದರು. ರಾತ್ರಿ ವೇಳೆ ನಡೆಸಿದ ಕಾರ್ಯಾಚರಣೆಯಲ್ಲಿ ವೃತ್ತವನ್ನು ತೆರವುಗೊಳಿಸಿ ಜಾಗವನ್ನು ಮೊದಲಿಂತೆ ಮಾಡಲಾಗಿದೆ. ಶುಕ್ರವಾರ ಬೆಳಗ್ಗೆ ನೋಡುವಷ್ಟರಲ್ಲಿ ವೃತ್ತ ಇಲ್ಲದಿರುವುದನ್ನು ಕಂಡ ಸಾರ್ವಜನಿಕರು ತಬ್ಬಿಬ್ಬಾದರು.

ಗುರುವಾರ ರಾತ್ರಿ ತಹಸೀಲ್ದಾರ್, ಪುರಸಭೆ ಮುಖ್ಯಾಧಿಕಾರಿ ಹಾಗೂ ಪೊಲೀಸರು ವೃತ್ತ ನಿರ್ಮಿಸಿದ ಮುಖಂಡರ ಜತೆಗೆ ಮಾತುಕತೆ ನಡೆಸಿ ಅನಧಿಕೃತವಾಗಿ ವೃತ್ತ ನಿರ್ಮಿಸಿದ್ದು ತಪ್ಪು ಎಂದು ಮನವೊಲಿಸಿದ ನಂತರ ತೆರವು ಕಾರ್ಯಾಚರಣೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

# ದೇವರ ಅಸ್ತಿತ್ವಕ್ಕೆ ಮೂರು ವಾದಗಳಿವೆ: ಅಕ್ಕನಾಗಲಾಂಬಿಕೆ

**ಜಮಖಂಡಿ :** ಅಮೂಲ್ಯನು, ಅಪ್ರಮಾಣನು, ಅಗೋಚರ, ನಿತ್ಯನಿರ್ಮಲನಾದ ದೇವರ ಅಸ್ತಿತ್ವದ ತತ್ತ್ವಜ್ಞಾನದಲ್ಲಿ ಪರಿಪೂರ್ಣತಾವಾದ, ಆದಿಕಾರಣವಾದ ಮತ್ತು ಸದುದ್ದೇಶವಾದ ಎಂದು ಮೂರು ವಾದಗಳಿವೆ ಎಂದು ಧಾರವಾಡ ಬಸವಯೋಗ ಮಂದಿರದ ಮಾತೋಶ್ರೀ ಅಕ್ಕನಾಗಲಾಂಬಿಕೆ ಹೇಳಿದರು.

ಸ್ಥಳೀಯ ಬಸವಜ್ಯೋತಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಆಶ್ರಯದಲ್ಲಿ 'ದೇವರು ಮತ್ತು ನೈತಿಕ ಮೌಲ್ಯಗಳು' ಕುರಿತು ಶಾಲಾ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಶರಣರು ದೇವರಿಗೆ ಬಯಲು ಎಂದು ಹೆಸರಿಸಿದ್ದಾರೆ.

ಬಯಲು ಎಂದರೆ ಶೂನ್ಯ. ಶೂನ್ಯದಲ್ಲಿ ಶೂನ್ಯ ಕೂಡಿದರೆ,



ಶೂನ್ಯದಲ್ಲಿ ಶೂನ್ಯ ಕಳೆದರೆ, ಶೂನ್ಯವನ್ನು ಶೂನ್ಯದಿಂದ ಭಾಗಿಸಿದರೆ ಮತ್ತು ಶೂನ್ಯವನ್ನು ಶೂನ್ಯದಿಂದ ಗುಣಿಸಿದರೆ ಶೂನ್ಯವೇ ಬರುತ್ತದೆ. ಶೂನ್ಯ ಎಲ್ಲವನ್ನು ಒಳಗೊಂಡಿದೆ. ಪೂರ್ಣನಾದ ದೇವರು ಪೂರ್ಣವಾದ ಜಗತ್ತನ್ನು ಸೃಷ್ಟಿಸಿ ಪೂರ್ಣನಾಗಿಯೇ ಉಳಿದಿದ್ದಾನೆ ಎಂಬುದು ಪರಿಪೂರ್ಣತಾವಾದ ಆಗಿದೆ ಎಂದರು.

ತನಗೊಬ್ಬನಿಗೆ ಕಾರಣವಿಲ್ಲದೆ ಉಳಿದಿದ್ದೆಲ್ಲದಕ್ಕೂ ಕಾರಣನಾದವನೇ ದೇವರು. ದೇವರು ಎಲ್ಲರಿಗೂ ತಂದೆ-ತಾಯಿ. ಆದರೆ, ದೇವರಿಗೆ ತಂದೆ-ತಾಯಿ ಇಲ್ಲ. ಎಲ್ಲದಕ್ಕೂ ದೇವರೇ ಕಾರಣ ಎಂಬುದು ಆದಿಕಾರಣವಾದವಾಗಿದೆ. ಒಂದು ಉದ್ದೇಶ ಇಟ್ಟುಕೊಂಡು ದೇವರು ಜಗತ್ತನ್ನು ಸೃಷಿಸಿದ್ದಾನೆ. ಕೈಗಡಿಯಾರ ತಯಾರಿಕೆಯ ಹಿಂದೆ ಒಬ್ಬ ತಂತ್ರಜ್ಞನಿರುವಂತೆ ಜಗತ್ತಿನ ಸೃಷ್ಟಿಯ ಹಿಂದೆ ದೇವರಿದ್ದಾನೆ ಎಂಬುದು ಸದುದ್ದೇಶವಾದವಾಗಿದೆ ಎಂದು ವಿವರಿಸಿದರು.

ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ, ದಾನೇಶ್ವರಿ ಮಹಿಳಾ ಮಂಡಳ ಅಧ್ಯಕ್ಷೆ ನಂದಿನಿ ಬಾಂಗಿ, ಸಂಸ್ಥೆಯ ಕಾರ್ಯದರ್ಶಿ ಶಕುಂತಲಾ ಕಡ್ಡಿ ಇದ್ದರು. ಸಂಗೀತ ಶಿಕ್ಷಕಿ ದೀಪಾ ವಚನ ಪ್ರಾರ್ಥನೆ ಮಾಡಿದರು. ಆಡಳಿತಾಧಿಕಾರಿ ಪ್ರೊ.ಬಸವರಾಜ ಕಡ್ಡಿ ಸ್ವಾಗತಿಸಿದರು. ರಾಜೇಸಾಬ ಶೇಖ ನಿರೂಪಿಸಿದರು. ಮುಖ್ಯ ಶಿಕ್ಷಕಿ ಉಮಾ ಚುಬಚಿ ವಂದಿಸಿದರು.

## ಹರ್ ಘರ್ ತಿರಂಗ ಅಭಿಯಾನದಡಿ ದೇಶ ಭಕ್ತಿ ಗೀತೆ ಗಾಯನ, ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮ

# ಮಕ್ಕಳು ದೇಶ ಭಕ್ತಿ, ದೇಶಾಭಿಮಾನ ಬೆಳಿಸಿಕೊಳ್ಳಿ: ಎಡಿಸಿ ಸಿದ್ರಾಮೇಶ್ವರ

**ಕೊಪ್ಪಳ :** ದೇಶ ಭಕ್ತಿ, ದೇಶಾಭಿಮಾನ ಬೆಳಿಸಿಕೊಳ್ಳಿ ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಮಕ್ಕಳಿಗೆ ಸಲಹೆ ನೀಡಿದರು.



ಹರ್ ಘರ್ ತಿರಂಗ ಅಭಿಯಾನದಡಿ ಕೊಪ್ಪಳ ಜಿಲ್ಲಾಡಾಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಜಿಲ್ಲಾಡಾಳಿತ ಭವನದ ಆಡಿಟೋರಿಯಂ ಹಾಲ್ ನಲ್ಲಿ ಆಗಸ್ಟ್ 14ರಂದು ಹಮ್ಮಿಕೊಳ್ಳಲಾಗಿದ ದೇಶ ಭಕ್ತಿ ಗೀತೆ ಗಾಯನ, ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

78ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ನಿರ್ದೇಶನದಂತೆ ಪ್ರತಿ ಮನೆ ಮನೆಗೂ, ಕಚೇರಿಗೂ ಆಗಸ್ಟ್ 12 ರಿಂದ ಆ.15 ರವರೆಗೆ ಮೂರು ದಿನಗಳ ಕಾಲ ರಾಷ್ಟ ಧ್ವಜವನ್ನು ಹಾರಿಸುವಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುದೆ. ದೇಶ ಭಕ್ತಿ, ಸ್ವಾತಂತ್ರ್ಯ ಹೋರಾಟಗಾರರು, ದೇಶಾಭಿಮಾನ ಬೆಳಿಸಿಕೊಳ್ಳವಂತಹ ನಿಟ್ಟಿನಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಹರ್ ಘರ್ ತಿರಂಗ ಅಭಿಯಾನ ಅಡಿ ದೇಶ ಭಕ್ತಿ ಗೀತೆ ಗಾಯನ, ವಿವಿಧ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದೆ.

ದೇಶ ಭಕ್ತಿ, ಸ್ವಾತಂತ್ರ್ಯ ಗೀತೆಗಳನ್ನು ಮನರಂಜಿಸಿ ಅದರೊಂದಿಗೆ ದೇಶ ಭಕ್ತಿಯನ್ನು ಬೆಳಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಭರತನಾಟ್ಯ ಮತ್ತು ನೃತ್ಯದ ಮೂಲಕ ದೇಶ ಮತ್ತು ದೇಶಾಭಿಮಾನ ಕುರಿತು ವಿವಿದ ದೇಶ ಭಕ್ತಿ ಗೀತೆ ಗಾಯನ, ವಿವಿಧ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಈ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ, ಜಿಲ್ಲಾ ದೈಹಿಕ ಶಿಕ್ಷಣಧಿಕಾರಿಗಳಾದ ಎ.ಬಸವರಾಜ್ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State